### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ


بِسْمِ اللهِ الرَّحْمٰنِ الرَّحِیْمِ　نَحْمَدُهٗ وَنُصَلِّیْ عَلٰی رَسُوْلِهِ الْکَرِیْمِ　وَعَلٰی عَبْدِهِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

**ವರ್ಷ: 02**

**ಸಂಚಿಕೆ: 24**

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

**ವಾರ್ಷಿಕ ಶುಲ್ಕ ರೂ.575/–**

**ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.**

**17 ಜೂನ್ 2021, 17 ಎಹ್ಸಾನ್ 1400 ತಬ್‌ಲೀಗ್ ಹಿಜರಿ ಶಮ್‌ಸಿ, 06 ಝುಲ್ ಖಅ್‌ದ 1442 ಹಿಜರಿ ಖಮರಿ.**


### ಅಲ್ಲಾಹನ ಉಪದೇಶ

لَقَدْ كَفَرَ الَّذِيْنَ قَالُوْٓا اِنَّ اللّٰهَ هُوَ الْمَسِيْحُ ابْنُ مَرْيَمَ ۭ قُلْ فَمَنْ يَّمْلِكُ مِنَ اللّٰهِ شَـيْـــًٔا اِنْ اَرَادَ اَنْ يُّهْلِكَ الْمَسِيْحَ ابْنَ مَرْيَمَ وَاُمَّهٗ وَمَنْ فِي الْاَرْضِ جَمِيْعًا (سورة المائدة:18)

**(ಅಲ್‌ಮಾಇದ: 18)**

**ಅಂದರೆ: 'ಖಂಡಿತವಾಗಿಯೂ ಅಲ್ಲಾಹನು ಮರ್ಯಮ್ ಪುತ್ರ ಮಸೀಹ್' ಎಂದು ಹೇಳುವವರು ನಿಸ್ಸಂಶಯವಾಗಿಯೂ ಅವಿಶ್ವಾಸಿಗಳಾಗಿದ್ದಾರೆ. ಹೇಳು: 'ಅಲ್ಲಾಹನು ಮರ್ಯಮ್ ಪುತ್ರ ಮಸೀಹನ್ನೂ ಅವರ ಮಾತೆಯನ್ನೂ ಭೂಮಿಯಲ್ಲಿರುವ ಎಲ್ಲರನ್ನೂ ನಾಶಪಡಿಸಲು ಬಯಸಿದರೆ ಅಲ್ಲಾಹನ ವಿರುದ್ಧವಾಗಿ ಯಾರಿಗೆ ಏನು ಶಕ್ತಿಯಿದೆ?**

### ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

**ನಜಾಷಿ ಹಬ್‌ಶಾ ದೊರೆಯ ಮೃತ್ಯುವಿನ ವಾರ್ತೆ ಕೇಳಿದಾಗ**
**ಅದೇ ದಿನ ಅಲ್ಲಾಹನು ದಿವ್ಯವಾಣಿಯ ಮೂಲಕ ಹಝ್ರತ್ ರಸೂಲುಲ್ಲಾಹ್[ಸ] ಸುದ್ದಿ ನೀಡಿದನು. ರಸೂಲುಲ್ಲಾಹ್[ಸ] ರವರು ಅವರ ನಮಾಝೆ ಜನಾಝಾ ಗಾಯಬ್ ನಿರ್ವಹಿಸಿದರು.**

(1318) ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ನಬಿ(ಸ) ತಮ್ಮ ಸಹಾಬರಿಗೆ (ಶಿಷ್ಯಂದರಿಗೆ) ನಜ್ಜಾಷಿಯವರ ನಿಧನಗೊಂಡ ಸೂಚನೆ ಕೊಟ್ಟರು. ಮತ್ತೆ ಅವರು(ಸ) ಮುಂದಾದರು ಹಿಂದೆ ಸಹಾಬರು ಸಾಲುಗಟ್ಟಿದರು. ಮತ್ತು ಅವರು ನಾಲ್ಕು ತಕ್ಬೀರ್‌ಗಳನ್ನು ಹೇಳಿದರು.

(1327) ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಹಬ್‌ಶಾದ ದೊರೆಯಾದ ನಜಾಶಿಯ ನಿಧನದ ವಾರ್ತೆ ನಮಗೆ ಅದೇ ದಿನ ಕೊಟ್ಟರು. ಯಾವ ದಿನ ಅವರು ನಿಧನಗೊಂಡಿದ್ದರು. ಅವರು ನುಡಿದರು. ತಮ್ಮ ಸಹೋದರನ ಮಗ್ಫಿರತ್‌ಗೋಸ್ಕರ ದುಆ ಮಾಡಿರಿ.

ಹಝ್ರತ್ ಸಯ್ಯದ್ ಝೈನುಲ್ ಆಬಿದೀನ ಮುಲ್ಲಾಹ್ ಶಾಹ್(ರ) ಹೇಳುತ್ತಾರೆ. ನಜಾಶಿಯ ಜನಾಝಾ, ಅವರ ಸಜ್ಜನಿಕೆಯ ಕಾರಣದಿಂದ ದಿವ್ಯವಾಣಿಯ ಮೂಲಕ ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ತಿಳಿಸಲಾಗಿತ್ತು. ಅವರು ವಿಶ್ವಾಸದಲ್ಲಿ ಸತ್ಯಸಂಧಕರು ಮತ್ತು ನಿಷ್ಠಾವಂತರಾಗಿದ್ದರು. ಅಲ್ಲಾಹನು ಅವರ ನಿಧನದ ಸೂಚನೆ ನೀಡುವ ಉದ್ದೇಶ ಹಝ್ರತ್ ರಸೂಲುಲ್ಲಾಹ್(ಸ) ರವರ ಕರ್ಮದಿಂದ ಸಾಬೀತುಗೊಂಡಿದೆ.

**(ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಜನಾಏಝ್, ಮುದ್ರಣ 2006 ಖಾದಿಯಾನ್)**

**ಮನುಷ್ಯನು ಒಂದಲ್ಲ ಒಂದು ದಿನ ಆಗಲಿ ಹೋಗುವನು, ಯಾವಾಗ ಮರಣ ಬರುವುದು ಎಂದು ಯಾರು ತಿಳಿಯರು. ಆಯಸ್ಸು ಶಾಶ್ವತವಾದುದಲ್ಲ, ಹೀಗಿರುವಾಗ ತಮ್ಮನ್ನು ಸುಧಾರಿಸಿಕೊಳ್ಳುವುದು ಮತ್ತು ವಿಜಯಕ್ಕಾಗಿ ಚಿಂತಿಸುವುದು ಎಷ್ಟು ಅನಿವಾರ್ಯವಾಗಿದೆ ನೀವೇ ಯೋಚಿಸಿ.**

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಲಾಲಾ ಕೇಶೋದಾಸ್ ಸಾಹೇಬ್ ತಹಶೀಲ್ದಾರರು ಬಟಾಲ, ಒಮ್ಮೆ ಯಾವುದೋ ಕೆಸದ ನಿಮಿತ್ತ ಖಾದಿಯಾನಿಗೆ ಆಗಮಿಸಿದ್ದರು. ಅದೆಸಂಧರ್ಭದಲ್ಲಿ ಹಝ್ರತ್ ಅಖದಸ್(ಅ) ರನ್ನು ಭೇಟಿ ಮಾಡಲು ಬಂದು ಹೇಳಿದರು. ನನಗೆ ಸಜ್ಜನರೊಡನೆ ಭೇಟಿಯಾಗಲು ತುಂಬ ತವಕವಿರುತ್ತದೆ. ಅದೇ ಕಾರಣದಿಂದ ತಮ್ಮ ಮುಂದೆ ಹಾಜರಾಗಿದ್ದೇನೆ. ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ನುಡಿದರು.

ನಿಸ್ಸಂಶಯವಾಗಿಯೂ ನಿಮಗೆ ಸಜ್ಜನರೊಂದಿಗೆ ಪ್ರೀತಿ ಇರದಿರುತ್ತಿದ್ದರೆ ನಮ್ಮ ಬಳಿಗೆ ಏಕೆ ಬರುತ್ತಿದ್ದೀರಿ? ಓರ್ವ ಲೌಕಿಕ ಪುರುಷನಿಗೆ, ಲೌಕಿಕ ಅವಶ್ಯಕತೆಗಳನ್ನು ಬಿಟ್ಟು ಒಬ್ಬ ಸಾಧುವಿನ ಬಳಿ ಬರುವ ಅವಶ್ಯಕತೆ ಏನಿದೆ? ಹೊಂದಾಣಿಕೆ ಎಂಬುದು ಒಂದು ಅನಿವಾರ್ಯ ವಸ್ತುವಾಗಿದೆ. ವಾಸ್ತವವೇನೆಂದರೆ ಮನುಷ್ಯನು ಒಂದಲ್ಲ ಒಂದು ದಿನ ಇಹಲೋಕದಿಂದ ಆಗಲಿ ಹೋಗುವನು. ಮರಣ ಯಾವಾಗ ಬರುವುದು ಯಾರು ತಿಳಿಯರು ಮತ್ತು ಆಯಸ್ಸು ಶಾಶ್ವತವಾದುದಲ್ಲ. ಹೀಗಿರುವಾಗ ತಮ್ಮ ಸುಧಾರಣೆ ಮತ್ತು ವಿಜಯಕ್ಕಾಗಿ ಚಿಂತಿಸುವುದು ಎಷ್ಟು ಅನಿವಾರ್ಯವಾಗಿದೆ. ನೀವೇ ಯೋಚಿಸಿ. ಲೋಕವು ಎಷ್ಟೊಂದು ಲೌಕಿಕ ಕಾರ್ಯಗಳಲ್ಲಿ ಮುಳುಗಿ ಹೋಗಿದೆ ಎಂದರೆ ಅದಕ್ಕೆ ಪರಲೋಕದ ಬಗ್ಗೆ ಕಿಂಚಿತ್ತೂ ಚಿಂತೆಯಿಲ್ಲ. ಅಲ್ಲಾಹನಿಂದ ಎಷ್ಟೊಂದು ದೂರವಾಗಿದ್ದಾರೆಂದರೆ, ಅವನು ಇದ್ದಾನೆ ಎಂಬ ನಂಬಿಕೆಯೂ ಉಳಿದಿಲ್ಲ. ಲೋಕದ ವಿಶ್ವಾಸ ಅಷ್ಟೊಂದು ಅಧೋಗತಿಗೆ ತಲುಪಿದ ಕಾರಣ ಅಲ್ಲಾಹನು ನನ್ನನ್ನು ನಿಯುಕ್ತಗೊಳಿಸಿ ಕಳುಹಿಸಿರುವನು. ಏಕೆಂದರೆ ನಾನು ಅವರಲ್ಲಿ ವಿಶ್ವಾಸವನ್ನು ಜಿವಂತಗೊಳಿಸಿ ಜೀವಂತ ದೇವನ ಮಾರ್ಗ ತೋರಿಸುವಂತಾಗಬೇಕು. ಇದು ದೇವನ ಸಾಮಾನ್ಯ ನಿಯಮವಾಗಿದೆ. ಸಜ್ಜನಿಕೆ ಮತ್ತು ಮಾರ್ಗದರ್ಶನದಿಂದ ದೂರವಾದ ಹಲವು ಜನರು, ದೇವಾಸಕ್ತ ಮತ್ತು ನ್ಯಾಯದಿಂದ ವಂಚಿತರಾದವರು, ನನಗೆ ಸುಳ್ಳುಗಾರ ಮತ್ತು ಮಿಥ್ಯವಾದಿ ಎಂದು ಕರೆದರು, ಎಲ್ಲ ರೀತಿಯಿಂದ ದುಃಖ, ಕಷ್ಟ ನಷ್ಟಗಳನ್ನು ಉಂಟುಮಾಡುವ ಪ್ರಯತ್ನ ಮಾಡಿದರು. ಕುಫ್ರ್‌ನ ಫತ್ವಾಗಳನ್ನು ಹೊರಡಿಸಿ ಮುಸಲ್ಮಾನರು ಅನುಮಾನಪಡುವಂತೆ ಮಾಡಿದರು. ಮತ್ತು ಸತ್ಯಕ್ಕೆ ವಿರುದ್ಧವಾದ ಘಟನೆಗಳನ್ನು ಸರಕಾರದ ಮುಂದಿಟ್ಟು ಪ್ರಚೋದನೆ ನೀಡುವ ಕಾರ್ಯಗಳನ್ನು ಕೈಗೆತ್ತಿಕೊಂಡರು. ಸುಳ್ಳು ಮೊಕದ್ದಮೆಗಳನ್ನು ಹೂಡಿದರು. ಬೈದರು. ಹತ್ಯೆಗೈಯುವ ಯೋಜನೆ ಹಾಕಿದರು. ಸಾಧ್ಯವಾದ ಎಲ್ಲಾ ಕರ್ಮಗಳನ್ನು ಅವರು ಮಾಡಿದರು. ಆದರೆ ನನ್ನ ಪ್ರಭು ಎಂದೆಂದೂ ನನ್ನ ಕೈಬಿಡಲಿಲ್ಲ. ಅವನು ನನಗೆ ಅವರ ಎಲ್ಲ ದುರಾಲೋಚನೆಗಳಿಂದ, ಪಿತೂರಿಗಳಿಂದ ಮುಂಚಿತವಾಗಿ ನನ್ನನ್ನು ರಕ್ಷಿಸಿದನು. ಅಲ್ಲಾಹನಿಂದ ದೇವಾಸಕ್ತಿ ಮತ್ತು ವಿಶ್ವಾಸದ ಪ್ರಕಾಶ ಹೊಂದಿದವರು ನನ್ನನ್ನು ಗುರುತಿಸಿದರು ಮತ್ತು ಆ ಪ್ರಕಾಶದಿಂದ ಭಾಗ ಪಡೆಯಲು ನನ್ನ ಸುತ್ತು ಸೇರಿದರು. ಅವರು ಅಲ್ಲಾಹನಿಂದ ಆಧ್ಯಾತ್ಮಿಕ ಜ್ಞಾನ ಪಡೆದವರಾಗಿದ್ದಾರೆ. ಅವರಲ್ಲಿ ದೊಡ್ಡ ದೊಡ್ಡ ಪಂಡಿತರಿದ್ದಾರೆ. ಪದವೀಧರರಿದ್ದಾರೆ, ವಕೀಲರಿದ್ದಾರೆ, ಡಾಕ್ಟರುಗಳಿದ್ದಾರೆ, ಅಗ್ರಗಣ್ಯ ಸರಕಾರಿ ಹುದ್ದೆ ಪಡೆದವರಾಗಿದ್ದಾರೆ, ವ್ಯಾಪರಸ್ಥರಿದ್ದಾರೆ ಮತ್ತು ಜಮೀನದ್ದಾರರು ಇದ್ದಾರೆ. ಸಾಮಾನ್ಯ ಜನರಿದ್ದಾರೆ.

ವಿಷಾದದ ಸಂಗತಿ ಎಂದರೆ ವಿರೋಧಿಗಳು ಇಷ್ಟಾದರೂ ಮಾಡುವುದಿಲ್ಲ. ನಾವು ಪ್ರಸ್ತುತಪಡಿಸುವಂತಹ ಸತ್ಯವನ್ನು ಸಮಾಧಾನವಾಗಿಯಾದರೂ ಆಲಿಸಬೇಕು. ಅವರಲ್ಲಿ ಇಂತಹ ನೈತಿಕತೆಯಾದರೂ ಎಲ್ಲಿ?

**(ಮಲ್ಫೂಝಾತ್ ಸಂಪುಟ–1, ಪುಟ–299–300, ಮುದ್ರಣ ಖಾದಿಯಾನ್ 2018)**

**ಬುದ್ಧಿಶಾಲಿಗಳು ಸದಾಕಾಲಕ್ಕೂ ಸ್ವರ್ಗದ ವಾರಸುದಾರರಾಗಿರುವವರು. ಅವರ ತಂದೆ ತಾಯಿಯರು ಮತ್ತು ಪತ್ನಿ ಹಾಗೂ ಅವರ ಸಂತಾನಗಳು ಅವರು ಸತ್ಕರ್ಮಿಗಳಾದರೆ ಅವರು ಸಹ ಸ್ವರ್ಗದಲ್ಲಿ ಅವರ ಜೊತೆಗಿರುವರು. ಶರತ್ತೇನೆಂದರೆ ಅವರು ಮುಕ್ತಿಪಡೆದಿರಬೇಕು. ಈ ವಾಸ್ತವ ಮತ್ತು ಸತ್ಯವನ್ನು ಕೇವಲ ಪವಿತ್ರ ಖುರ್‌ಆನ್ ಉಲ್ಲೇಖಿಸಿದಯೇ ಹೊರತು ಲೋಕದ ಯಾವ ಗ್ರಂಥವು ಈ ಸಮಸ್ಯೆಯನ್ನು ಉಲ್ಲೇಖಿಸಿಲ್ಲ.**

ಸಯ್ಯದನಾ ಹಝ್ರತ್ ಮುಸ್ಲಿಹ್ ಮೌಊದ್(ಅ) ಸೂರಃ ಅರ್ರದ್ ವಚನ 24 **ಜನ್ನಾತುನ್ ಅದನಿಂಯ್ಯದ್‌ಖುಲೂನಹಾ ವಮನ್ ಸಲಹ ಮಿನ್ ಆಬಾಇಹಿಮ್ ವ ಅಝ್‌ವಾಜಿಹಿಮ್ ವ ಝುರ್ರೀಯಾತಿಹಿಮ್ ವಲ್ ಮಲಾಇಕತು ಯದ್‌ಖುಲೂನ ಅಲೈಹಿಮ್ ಮಿನ್ ಕುಲ್ಲಿ ಬಾಬಿನ್** ರ ವ್ಯಾಖ್ಯಾನದಲ್ಲಿ ಹೇಳುತ್ತಾರೆ.

*(ಪುಟ ಸಂಖ್ಯೆ–10 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰه

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرَّ السُّمُوْمِ عَدَاوَةُ الصُّلَحَاءِ

**ಅಬ್ದುಲ್ಲ ಆಥಮ್, ಇಸ್ಲಾಮಿನ ಭವಿಷ್ಯವಾಣಿಯಿಂದ ನಾನು ಹೆದರಲಿಲ್ಲ ಎಂದು ಹೇಳಿಕೆ ನೀಡಿದರೆ ನಾನು ಅವರಿಗೆ ನಾಲ್ಕು ಸಾವಿರ ರೂಪಾಯಿಗಳ ದೊಡ್ಡ ಮೊತ್ತದ ಬಹುಮಾನ ನೀಡುವೆನು.**

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ಈ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥವಾದ 'ಅನ್ವಾರುಲ್ ಇಸ್ಲಾಮ್" ಮತ್ತು "ಜಿಯಾವುಲ್ ಹಖ್" ರೂಹಾನಿ ಖಝಾಯಿನ್ ಸಂಪುಟ 9 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ದಿನಾಂಕ 22 ಮೇ 1893 ರಿಂದ 05 ಜೂನ್ 1893 ರವರೆಗೆ 15 ದಿನಗಳವರೆಗೆ ಅಮೃತಸರದಲ್ಲಿ ಇಸ್ಲಾಮ್ ಮತ್ತು ಕ್ರೈಸ್ತರ ನಡುವೆ ಒಂದು ಅಮೋಘವಾದ ಚರ್ಚಾಕೂಟ ಏರ್ಪಟ್ಟಿತ್ತು. ಅದನ್ನು ಕ್ರೈಸ್ತರು "ಜಂಗೆ ಮುಖದ್ದಸ್" ಎಂಬ ಹೆಸರು ನೀಡಿದ್ದರು. ಇಸ್ಲಾಮ್ ಧರ್ಮದ ಪರವಾಗಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅದರ ಹಕ್ಕನ್ನು ಪಾಲಿಸುತ್ತಿದ್ದರು. ಕ್ರೈಸ್ತರ ಪರವಾಗಿ ಡಿಪ್ಟಿ ಅಬ್ದುಲ್ಲಾ ಆಥಮ್ ವಾದಿಸುವವನಾಗಿದ್ದ. ಇಸ್ಲಾಮ್ ಮತ್ತು ಕ್ರೈಸ್ತರ ನಡುವೆ ನಡೆದ ಈ ಅಮೋಘವಾದ ಯುದ್ಧದಲ್ಲಿ ಕ್ರೈಸ್ತರಿಗೆ ಹೀನವಾದ ಸೋಲು ಉಂಟಾಗಿತ್ತು. ಅದರಿಂದ ಕ್ರೈಸ್ತ ಪಾದರಿಗಳಿಗೆ ತೀವ್ರ ಅಪಮಾನ ಅನುಭವಿಸ ಬೇಕಾಯಿತು. ಮತ್ತು ಅವರಿಗೆ ಮನವರಿಕೆಯಾಗಿಬಿಟ್ಟಿತ್ತು. ಇದೀಗ ಇಸ್ಲಾಮ್ ಧರ್ಮವನ್ನು ಎದುರಿಸುವುದು ಕಷ್ಟ ಸಾಧ್ಯವೇನೂ ಅಲ್ಲ. ಸಾಧ್ಯವೆ ಇಲ್ಲ. ಇಸ್ಲಾಮಿನ ಈ ಜಟ್ಟಿಯ ಮುಂದೆ ನಿಲ್ಲುವುದೆಂದರೆ ತನ್ನನ್ನು ತಾನು ಮರಣಕ್ಕೆ ಆಹ್ವಾನಿಸಿದಂತಿತ್ತು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಚರ್ಚೆಯ ಪ್ರಾರಂಭದಲ್ಲಿಯೇ ಸ್ಪಷ್ಟಪಡಿಸಿದ್ದರು. ಉಭಯೇತ್ತರರು ಪ್ರತಿವಾದಿಗಳು ತಮ್ಮ ದಾವೆ ಮತ್ತು ಸಾಕ್ಷ್ಯಗಳನ್ನು ತನ್ನ ದೈವಿಕ ಗ್ರಂಥಗಳಿಂದಲೇ ಪ್ರಸ್ತುತಪಡಿಸಬೇಕು. ಏಕೆಂದರೆ ವಾದಿ ಆದವನು ಸುಸ್ತು ಆದರೆ ಸಾಕ್ಷಿದಾರನು ಚುರುಕು ಎಂಬಂತೆ ಆಗಬಾರದು. ನಾವೇ ಹೇಳುತ್ತ ಹೋಗುತ್ತಿದ್ದೇವೆ. ನಮ್ಮ ಗ್ರಂಥ ಏನು ಹೇಳುತ್ತಿಲ್ಲ, ಅಂದರೆ ಏನರ್ಥ, ಪಾದರಿ ಅಬ್ದುಲ್ಲ ಆಥಮ್ ಇಡೀ ಚರ್ಚೆಯ ನಡುವೆ ವಿಫಲಗೊಂಡಿದ್ದನು. ಅವನು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಯಾವ ಆಕ್ಷೇಪಕ್ಕೂ ಉತ್ತರ ನೀಡದಂತಾಯಿತು. ಮಸೀಹನ ದೇವತ್ವವಾಗಲಿ, ಇಂಜೀಲಿನಿಂದ ಮುಕ್ತಿ ದೊರೆಯುವ ವಿಷಯವಾಗಲಿ ಯಾವುದನ್ನೂ ಸಹ ಇಂಜೀಲಿನಿಂದ ಸಾಬೀತುಪಡಿಸಲು ಸಾಧ್ಯವಾಗಲಿಲ್ಲ.

ಹಝ್ರತ್ ಮೌಲಾನಾ ಜಲಾಲುದ್ದೀನ್ ಶಮ್ಸ್(ರ) "ಜಂಗೆ–ಮುಖದ್ದಸ್" ಗ್ರಂಥಧ ಪೀಠಿಕೆಯಲ್ಲಿ ಹೇಳುತ್ತಾರೆ. ಕಾಸಿರೆ ಸಲೀಬ್ (ಶಿಲುಬೆ ವಿಮೋಚನ) ಹಝ್ರತ್ ಮಸೀಹ್ ಮೌಊದ್(ಅ) ಚರ್ಚೆಯ ಪ್ರಾರಂಭದಲ್ಲಿಯೇ ಯಾವ ತರಹದ ಆಕ್ರಮಣ ಮಾಡಿದರೆಂದರೇ ಅವರ ಎದುರಾಳಿಗಳಾದ ಪಾದರಿ ಅಬ್ದುಲ್ಲ ಆಥಮ್ ಮತ್ತು ಅವರ ಸಹಾಯಕರು ಕೊನೆಯವರೆಗೆ ಅರ್ಧ ಜೀವ ಶವಗಳಂತೆ ಉಸಿರು ಬಿಡುತ್ತಿದ್ದರು. ಆದರೆ ನಿಜವಾದ ಉತ್ತರ ನೀಡಲು ಅವರಿಂದ ಸಾಧ್ಯವೇ ಇರಲಿಲ್ಲ. ಅಂತೂ ಸಾಧ್ಯವಾಗಲಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಯಶಸ್ವಿ ರೀತಿಯ ವಾದ ಮಂಡಿಸುತ್ತಾ ನುಡಿದರು. "ತಿಳಿದಿರಲಿ ಈ ಚರ್ಚೆಯಲಿ ಅನಿವಾರ್ಯವಾಗಿರುವುದೇನೆಂದರೆ ನಮ್ಮ ಕಡೆಯಿಂದ ಮಾಡಲಾಗುವ ಯಾವ ಪ್ರಶ್ನೆ ಆಗಲಿ ಅಥವಾ ಡಿಪ್ಟಿ ಅಬ್ದುಲ ಆಥಮ್‌ರವರ ಕಡೆಯಿಂದ ಯಾವ ಉತ್ತರವಾಗಲಿ ಅದು ತನ್ನ ಕಡೆಯಿಂದ ಆಗಿರಬಾರದು. ಬದಲು ತಮ್ಮ ತಮ್ಮ ಧರ್ಮಗ್ರಂಥದ ಆಧಾರವಾಗಿರಬೇಕು. ಅದನ್ನು ಎದುರಾಳಿ ಪಕ್ಷ ನ್ಯಾಯ ತೀರ್ಮಾನಕ್ಕೆ ಬದ್ಧನಾಗಿರಬೇಕು. ಅದರಂತೆ ಪ್ರಸ್ತುತಪಡಿಸುವ ಎಲ್ಲ ಸಾಕ್ಷ್ಯಗಳು ಮತ್ತು ದಾವೆಗಲು ಅದೇ ಆಯಮದಂತಿರಬೇಕು. ಅಂತೂ ಯಾವ ಪಕ್ಷವೂ ಆ ಗ್ರಂಥದ ಹೇಳಿಕೆಯಿಂದ ಹೊರಗೆ ಹೋಗಬಾರದು. ಏಕೆಂದರೆ ಅದುವೇ ನಮಗೆ ಅಂತಿಮ ನ್ಯಾಯ ತೀರ್ಪಿಗೆ ಬದ್ಧವಾಗಿದೆ.

ಹಝ್ರತ್ ಮೌಲಾನ ಜಲಾಲುದ್ದೀನ್ ಸಾಹಿಬ್ ಶಮ್ಸ್(ರ) ಹೇಳುತ್ತಾರೆ. ಇಡೀ ಚರ್ಚೆಯ ವಿವರಗಳನ್ನು ಪ್ರಾರಂಭದಿಂದ ಅಂತ್ಯದವರೆಗೆ ಅಧ್ಯಯನ ಮಾಡಿ ನೋಡಿ ಸ್ಪಷ್ಟವಾಗುವುದು ಕ್ರೈಸ್ತ ವಾದಿಗಳು ಕೊನೆಯವರೆಗೆ ಆ ಮಾನದಂಡದ ಮೇಲೆ ನಡೆಯಲಾಗಲಿಲ್ಲ. ಆಶ್ಚರ್ಯದ ಸಂಗತಿ ಎಂದರೆ ಅವರು ದಾವೆ ಮತ್ತು ಸಾಕ್ಷ್ಯ ನಡುವೆ ವ್ಯತ್ಯಾಸವನ್ನು ಸಹ ಕಂಡು ಹಿಡಿಯಲು ಆಗಲಿಲ್ಲ. ಆದರೆ ಹಝ್ರತ್ ಮಸೀಹ್ ಮೌಊದ್(ಅ) ಪವಿತ್ರ ಖುರ್‌ಆನ್‌ನಿಂದ ಯಾವ ದಾವೆಯನ್ನು ಮಂಡಿಸಿದರೋ ಅದನ್ನು ಬೌದ್ಧಿಕ ಪುರಾವೆಗಳು ಸಹ ಪವಿತ್ರ ಖುರ್‌ಆನ್‌ನಿಂದಲೇ ಪ್ರಸ್ತುತಪಡಿಸಿದರು.
(ಜಂಗೆ–ಮುಖದ್ದಸ್ ಗ್ರಂಥ ಪೀಠಿಕೆ, ರೂಹಾನಿ ಖಝಾಯಿನ್, ಸಂಪುಟ–6)

ಸಯ್ಯದ್‌ನಾ ಹಜ್‌ರತ್ ಮಸೀಹ್ ಮೌಊದ್(ಅ) ಚರ್ಚೆಯ ಕೊನೆಯಲ್ಲಿ ನುಡಿದರು. ಇಂದು ಇದು ನನ್ನ ಅಂತಿಮ ಪತ್ರಿಕೆಯಾಗಿದೆ. ಅದು ಡೆಪ್ಯೂಟಿ ಸಾಹೇಬರ ಉತ್ತರವಾಗಿ ಬರೆಸುತ್ತಿದ್ದೇನೆ. ಆದರೆ ನನಗೆ ವಿಷಾದವೆನಿಸುತ್ತದೆ. ಯಾವ ಶರತ್ತುಗಳೊಂದಿಗೆ ಈ ಚರ್ಚೆ ಪ್ರಾರಂಭಿಸಲಾಗಿತ್ತೋ ಡೆಪ್ಯುಟಿ ಸಾಹೇಬರು ಅದನ್ನು ಕಿಂಚಿತ್ತೂ ಪಾಲಿಸಲಿಲ್ಲ. ಶರತ್ತಿನ ಪ್ರಕಾರ ನಾನು ಪ್ರತಿಯೊಂದು ದಾವೆಯನ್ನು ಮತ್ತು ಸಾಕ್ಷ್ಯಗಳನ್ನು ಪವಿತ್ರ ಖುರ್‌ಆನ್‌ನ ಸೂಕ್ತವಾದ ಪುರಾವೆಗಳೊಂದಿಗೆ ಪ್ರಸ್ತುತಪಡಿಸಿದ್ದೇವೆ. ಡೆಪ್ಯೂಟಿ ಸಾಹೇಬರು ಹಾಗೆಯೇ ಪ್ರಸ್ತುತಪಡಿಸಬೇಕು. ಆದರೆ ಅವರು ಆ ಶರತ್ತುಗಳನ್ನು ಪಾಲಿಸಲಿಲ್ಲ. ಹೋಗಲಿ, ಈಗ ಓದುಗರು ಸ್ವಯಂ ನೋಡಬಹುದಾಗಿದೆ.( ಜಂಗಿ – ಮುಕದ್ದಸ್, ಪುಟ–217)

ಹಝ್ರತ್ ಮೌಲಾನ ಜಲಾಲುದ್ದೀನ್ ಸಾಹಿಬ್ ಶಮ್ಸ್(ರ) ಜಂಗೆ–ಮುಖದ್ದಸ್ ಪುಸ್ತಕದ ಪೀಠಿಕೆಯಲ್ಲಿ ಬರೆಯುತ್ತಾರೆ. ಇ ಜಂಗೆ–ಮುಖದ್ದಸ್ "ಕಾಸಿರೆ ಸಲೀಬ್ (ಶಿಲುಬೆ ವಿಮೋಚಕ) ಮತ್ತು ಶಿಲುಬೆ ವರ್ತಕರ ನಡುವೆ ಏರ್ಪಟ್ಟಿತ್ತು. ಆ ಮೈದಾನವನ್ನು ಇಸ್ಲಾಮ್ ಗೆದ್ದುಕೊಂಡಿತು. ಅವರ ಶಿಲುಬೆ ಯಾವ ಹಂತಕ್ಕೆ ಮುರಿಯಲ್ಪಟ್ಟಿತು ಎಂದರೆ ಅದು ಮತ್ತೆ ಎಂದೂ ಜೋಡಿಸಲು ಸಾಧ್ಯವಿರಲಿಲ್ಲ. ಮುಸಲ್ಮಾನರು ಸಂತೋಷಗೊಂಡರು ಮತ್ತು ಶಿಲುಬೆ ಸಮರ್ಥಕರಲ್ಲಿ ಸೂತಕ ಉಂಟಾಯಿತು. ಈ ಚರ್ಚೆಯ ಹಿತಕರ ಪರಿಣಾಮಗಳು ಚರ್ಚಾ ದಿನಗಳಲ್ಲಿಯೇ ಗೋಚರಿಸಲು ಆರಂಭವಾಗಿದ್ದವು. ಅಂದ ಹಾಗೆ ಚರ್ಚಾ ದಿನಗಳಲ್ಲಿ ಮಿಯಾ ನಬಿ ಬಕ್ಷ್ ರೇಷ್ಮೆ ವ್ಯಾಪಾರಿ ಅಮೃತ್ಸರ ಮತ್ತು ನಮ್ಮ ಗುರುಗಳನ್ನು ಫಿಖ ಹಾಗೂ ಹದೀಸಿನ ಸಾಲ್ಲತ್ ರೂಪ ಪಂಡಿತರಾದ ಹಝ್ರತ್ ಖಾಝೀ ಅಮೀರ್ ಹುಸೇನ್(ರ), ಹಝ್ರತ್ ಮಸೀಹ್ ಮೌಊದ್(ಅ) ರವರ ಕೈಯಲ್ಲಿ ಬೈಅತ್ ಮಾಡಿ ಅಹ್ಮದಿಯಾ ಸಂಘಟನೆಗೆ ಸೇರಿಕೊಂಡರು. ಖಾಝೀ ಸಾಹಿಬ್ ಆ ದಿನಗಳಲ್ಲಿ ಇಸ್ಲಾಮಿಯಾ ಮದರಸಾ ಅಮೃತ್ಸರದಲ್ಲಿ ಗುರುಗಳಾಗಿದ್ದರು. ಅವರು ಅಹ್ಮದಿ ಆದ ಕಾರಣದಿಂದ ಮೌಲ್ವಿಗಳು ಮನೆಗಳಲ್ಲಿ ಹುಯಿಲೆಬ್ಬಿಸಿದರು.

ಅದೇ ರೀತಿ ಕರ್ನಲ್ ಅಲ್ತಾಫ್ ಅಲಿ ಖಾನ್ ಸಾಹಿಬ್ ರಈಸ್ ಕಪೂರ್‌ಥಲ ಅವರು ಕ್ರೈಸ್ತಮತ ಸ್ವೀಕರಿಸಿದ್ದರು. ಚರ್ಚಾ ವೇಳೆಯಲ್ಲಿ ಕ್ರೈಸ್ತರ ಪರವಾಗಿ ಕುಳಿತುಕೊಂಡಿದ್ದರು. ನಂತರ ಇಸ್ಲಾಮ್ ಧರ್ಮ ಸ್ವೀಕರಿಸಿದರು. ಆಗ ಕ್ರೈಸ್ತ ಪಾದರಿಗಳಿಗೆ ಮನವರಿಕೆಯಾಯಿತು. ಅವರ ಎದುರಾಳಿ ಹಝ್ರತ್ ಮಸೀಹ್ ಮೌಊದ್(ಅ) ಇಸ್ಲಾಮಿನ ಓರ್ವ ಅದ್ವಿತೀಯ ಪೈಲ್ವಾನನಾಗಿದ್ದಾರೆ. ಮತ್ತು ಅವರ ಧರ್ಮ ರದ್ದತಿಗೆ ಬೇಕಾಗಿರುವ ಹಾಗೂ ಇಸ್ಲಾಮಿನ ಪರ ವಹಿಸುವ ಪೂರ್ಣ ಜ್ಞಾನ ಪಡೆದಿದ್ದಾರೆ. ಅದರಿಂದ ಶಿಲುಬೆಯನ್ನು ತುಂಡರಿಸುವ ಕಾರ್ಯ ಆಗಲೇ ಬೇಕಾಗಿತ್ತು. ಅಂದ ಹಾಗೆ ಈ ಮಹೋನ್ನತವಾದ ಚರ್ಚಾಕೂಟದಲ್ಲಿ ಹೆಸರಾಂತ ಪಾದರಿಗಳಿಗೆ ಸೋಲು ಉಂಟಾಯಿತು. ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಯಾವ ರೀತಿ ಇಸ್ಲಾಮ್ ಧರ್ಮವನ್ನು ಒಂದು ಜೀವಂತ ಧರ್ಮ ಮತ್ತು ಹಜ್‌ರತ್ ರಸೂಲುಲ್ಲಾಹ್(ಸ) ರನ್ನು ಜೀವಂತ ಪ್ರವಾದಿ ಹಾಗೂ ಪವಿತ್ರ ಖುರ್‌ಆನ್ನು ಜೀವಂತ ಗ್ರಂಥ ಎಂದು ಸಾಬೀತುಪಡಿಸಿದ್ದರು. ಅದರಿಂದ ಕ್ರೈಸ್ತ ಲೋಕ ಪ್ರಭಾವಿತರಾಗದೇ ಇರಲು ಬೇರೆ ದಾರಿ ಇರಲಿಲ್ಲ. ಅಂದ ಹಾಗೆ ಬ್ರಿಟಾನಿಯಾದ ಹಲವು ಮಿಷನರಿಗಳು ಅವು ಪಂಜಾಬ್ ಮತ್ತು ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು ತುಂಬಾ ಪ್ರಭಾವಿತರಾದರು. ಅಂದ ಹಾಗೆ 1894 ರಲ್ಲಿ ಲೋಕದಾದ್ಯಂತ ಪಾದರಿಗಳ ಒಂದು ಅಮೋಘವಾದ ಸಮ್ಮೇಳನವನ್ನು ಲಂಡನ್ನಿನಲ್ಲಿ ಏರ್ಪಡಿಸಿದ್ದರು. ಅದರ ಒಂದು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಲಾರ್ಡ್ ಬಿಷಪ್ ಆಫ್ ಗ್ಲೊಸ್ಟರ್ ರೆವೆರೆಂಡ್ ಚಾರಲಸ್ ಜಾನ್ ಎಲಿಕೋಟ್ ಹೇಳಿದರು. ಇಸ್ಲಾಮಿನಲ್ಲಿ ಒಂದು ಹೊಸ ಜೀವಿತದ ಕುರುಹುಗಳು ನಿಚ್ಚಳವಾಗಿವೆ. ನನಗೆ ಅನುಭವಿ ಸಂಗಡಿಗರಿಂದ ತಿಳಿದುಬಂದಿದೆ. ಬ್ರಿಟಾನಿಯಾ ಆಡಳಿತಗಳಲ್ಲಿ ಒಂದು ಹೊಸ ರೀತಿಯ ಇಸ್ಲಾಮ್ ನಮ್ಮ ಮುಂದೆ ಆಗಮಿಸಿದೆ. ಈ ದ್ವೀಪಗಳಲ್ಲೂ ಅಲ್ಲಲ್ಲಿ ಅದರ ಪ್ರಭಾವ ಕಾಣಸಿಗತೊಡಗಿದೆ. ಯಾವ ಕಾರಣದಿಂದ ಮುಹಮ್ಮದ್(ಸ) ರವರ ಧರ್ಮ ನಮ್ಮ ದೃಷ್ಟಿಯಲ್ಲಿ ದ್ವೇಷಕ್ಕೆ ಕಾರಣವಾಗಿದೆಯೋ, ಆ ನವೀನಾಚಾರಕರುಗಳ ಬಗ್ಗೆ ಇವರು ಕಡು ವಿರೋಧಿಯಾಗಿದ್ದಾರೆ. ಈ

*(ಪುಟ 11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಏ ದಿಲ್ ತೂ ನೀಝ್ ಖಾತಿರೇ ಈನಾನ್ ನಿಗಾಹ್‌ದಾರ್ * ಕ ಆಖಿರ್ ಕುನಂದ್ ದಅ್‌ವೇ ಹುಬ್ಬೇ ಪೈಯಂಬರಂ.**

**ಅಹ್ಮದಿಯರು ಹಝ್ರತ್ ಪೈಗಂಬರರನ್ನು(ಸ) ನಿಂದಿಸುವವರಾಗಿರುವರು, ಆದ್ದರಿಂದ ಅಹ್ಮದಿಯರೊಂದಿಗೆ ಮೌಲವಿಯರು ಹೇಳುವ ರೀತಿಯಲ್ಲಿ ವರ್ತಿಸಬೇಕು; ಏಕೆಂದರೆ ಅವರು (ಮೌಲವಿಗಳು) ಸತ್ಯ ಹೇಳುತ್ತಿದ್ದಾರೆ ಎಂದು ಬಹುಶಃ ಅಲ್ಪಜ್ಞಾನದ ಕಾರಣದಿಂದ ಜನಸಾಮಾನ್ಯರು ಭಾವಿಸುತ್ತಾರೆ.**

**ನಾವು ಯಾವಾಗಲೂ ನೋಡುತ್ತಿರುವಂತೆ ಅವರಿಂದಲೇ ಪ್ರೇಮದ ಹನಿಗಳು ಬೀಳುತ್ತಾ ಬಂದಿವೆ ಮತ್ತು ಮುಂದೆಯೂ ತೊಟ್ಟಿಕ್ಕುವುವು ಇನ್‌ಶಾಅಲ್ಲಾಹ್**

**ನಾವು ಹಝ್ರತ್ ಪೈಗಂಬರರ(ಸ) ವಿರೋಧಿಗಳಾಗಿದ್ದೇವೆ ಎಂದು ಭಾವಿಸುವುದರಿಂದ ಅವರು ನಮ್ಮನ್ನು ಎದುರಿಸುತ್ತಾರೆ. ಇದು ಕೆಲವು ತಪ್ಪುಗ್ರಹಿಕೆಯ ಕಾರಣದಿಂದಾಗಿದೆ**

**ನೀವು ಲೋಕವನ್ನು ಕೆಲವು ದಿನಗಳಿಗೆ ಮೋಸ ಮಾಡಬಲ್ಲಿರಿ ಅಥವಾ ಕೆಲವು ಜನರನ್ನು ಸದಾ ಕಾಲಕ್ಕೆ ಮೋಸಮಾಡಬಲ್ಲಿರಿ. ಆದರೆ ಲೋಕದ ಎಲ್ಲರನ್ನು ಸದಾ ಕಾಲಕ್ಕೆ ಮೋಸಮಾಡಲಾಗದು. ಸತ್ಯವು ಮೆಲ್ಲಮೆಲ್ಲನೆ ತೆರೆದು ಮುಂದೆ ಬರುತ್ತದೆ**

**ನಮ್ಮ ಕೆಲಸ ದುಆ ಮಾಡುವುದಾಗಿದೆ ಮತ್ತು ಸಹನೆ ಕೈಗೊಳ್ಳುವುದಾಗಿದೆ. ನಮಗೆ ವಿಜಯವನ್ನು ನೀಡುವಂತಹ ಅತ್ಯುತ್ತಮ ಮಾರ್ಗವು ಇದೇ ಆಗಿದೆ. ಇನ್‌ಶಾ ಅಲ್ಲಾಹ್.**

**ಮುಸ್ಲಿಮರ ಬಗ್ಗೆ ನಮಗೆ ಉತ್ತಮ ಮತ್ತು ಶುದ್ಧವಾದ ಆಲೋಚನೆಗಳು ಮತ್ತು ನಮ್ಮ ಭಾವನೆಗಳು ಇರಬೇಕು. ಅಲ್ಲಾಹನು ಅವರ ಕಣ್ಣುಗಳನ್ನು ತೆರೆಯಲಿ ಮತ್ತು ಅವರು ಕಾಲಘಟ್ಟದ ಇಮಾಮನ್ನು ನಂಬುವವರೂ ಅರಿಯುವವರೂ ಆಗಲಿ ಎಂದು ಅವರಿಗಾಗಿ ದುಆ ಮಾಡಬೇಕು.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **14-05-2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

اِيَّاكَ نَعْبُدُ وَاِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ ۔

ಲೋಕದಲ್ಲಿ ನಡೆಯುತ್ತಿರುವ ಎಲ್ಲ ಗಲಭೆಗಳಿಗೆ ಮತ್ತು ಜಗಳಗಳಿಗೆ ಕಾರಣಕರ್ತರು ಖಾದಿಯಾನಿಗಳು, ಮಾತ್ರವಲ್ಲ ಫೆಲಸ್ತೀನಿನಲ್ಲಿ ನಡೆಯುತ್ತಿರುವ ಕೋಲಾಹಲಕ್ಕೂ ಖಾದಿಯಾನಿಗಳೇ ಜವಾಬ್ದಾರರು ಎಂದು ಕೆಲವು ದಿನಗಳ ಹಿಂದೆ ಒಬ್ಬ ಮೌಲವಿ ಸಾಹಿಬ್ ಸೋಶಿಯಲ್ ಮೀಡಿಯದಲ್ಲಿ ಹೇಳುತ್ತಿದ್ದನು. ಆದ್ದರಿಂದ ಅಹ್ಮದಿಯರೊಂದಿಗೆ ಹೀಗೆ ವರ್ತಿಸಬೇಕು, ಹಾಗೆ ವರ್ತಿಸಬೇಕು, ಅವರನ್ನು ಕೊಲ್ಲುವುದು, ಹೊಡೆಯುವುದು ಎಲ್ಲವೂ ಅನುಮತನೀಯ ಎಂದು ಸಹ ಈ ನಮ್ಮ ವಿರೋಧಿಗಳು ಸಾಮಾನ್ಯವಾಗಿ ಹೇಳುವ ರೀತಿಯಲ್ಲಿ ಹೇಳುತ್ತಿದ್ದನು. ಹೇಗಿದ್ದರೂ ಇದು ಅವರ ರೀತಿಯಾಗಿದೆ, ಇವು ಅವರ ಮಾತುಗಳಾಗಿವೆ. ಅಹ್ಮದಿಯ್ಯತ್ತಿನ ಆರಂಭದಿಂದಲೇ ಈ ಮಾತುಗಳನ್ನೇ ಈ ಜನರು ಹೇಳುತ್ತಾ ಬಂದಿರುವರು. ಆದರೆ ಈ ಬೈಗುಳಗಳು, ಮೂರ್ಖತನದ ಮಾತುಗಳು ಮತ್ತು ಮನನೋಯಿಸುವ ಮಾತುಗಳನ್ನು ಕೇಳಿಕೊಂಡು, ಮಾತ್ರವಲ್ಲ ಅವರ ಕೃತ್ಯಗಳನ್ನು ಕಂಡುಕೊಂಡು, ಅದನ್ನು ಎದುರಿಸಿಕೊಂಡು ಸಹನೆಯನ್ನು ಕೈಗೊಳ್ಳಬೇಕು ಮತ್ತು ಪ್ರಾರ್ಥನೆಯನ್ನು ಮಾಡಬೇಕೆಂದು ನಮಗೆ ಕಲಿಸಿಕೊಟ್ಟ ಮಸೀಹ್ ಮತ್ತು ಮಹ್‌ದಿಯನ್ನು ನಂಬುವವರಾಗಿದ್ದೇವೆ ನಾವು ಎಂಬುದಕ್ಕೆ ಅಲ್ಲಾಹನಿಗೆ ಲಕ್ಷಗಟ್ಟಲೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಈ ಮುಖಂಡರು ಅಹ್ಮದಿಯಾ ಜಮಾಅತಿನ ಕುರಿತು ತಪ್ಪಾದ ಸಂಗತಿಗಳನ್ನು ಹರಡಿಕೊಂಡು ಅಮಾಯಕರಾದ ಮುಸ್ಲಿಮರನ್ನು ರೊಚ್ಚಿಗೆಬ್ಬಿಸಿದ್ದಾರೆ. ಅಹ್ಮದಿಯರು ಹಝ್ರತ್ ಪೈಗಂಬರರನ್ನು(ಸ) ನಿಂದಿಸುವವರಾಗಿರುವರು, ಆದ್ದರಿಂದ ಅಹ್ಮದಿರೊಂದಿಗೆ ಮೌಲವಿಯರು ಹೇಳುವ ರೀತಿಯಲ್ಲಿ ವರ್ತಿಸಬೇಕು; ಏಕೆಂದರೆ ಅವರು ಸತ್ಯ ಹೇಳುತ್ತಿದ್ದಾರೆ ಎಂದು ಬಹುಶಃ ಅಲ್ಪಜ್ಞಾನದ ಕಾರಣದಿಂದ ಜನಸಾಮಾನ್ಯರು ಭಾವಿಸುತ್ತಾರೆ. ಇದು ಜನ ಸಾಮಾನ್ಯ ಮುಸ್ಲಿಮರ ಅವಸ್ಥೆಯಾಗಿದೆ. ಆದರೆ ಅರಿವುಳ್ಳ ಮೌಲವಿಗಳು, ನಿಜಸ್ಥಿತಿಯ ಬಗ್ಗೆ ಗೊತ್ತಿರುವ ಮೌಲವಿಗಳು ಆಧಾರರಹಿತವಾಗಿ ಮಾತನಾಡುತ್ತಾರೆ. ಇವರ ಮಿಂಬರ್ ಕೈಬಿಟ್ಟು ಹೋಗದಿರಲು ಅಥವಾ ಸ್ಥಾನಪಲ್ಲಟವಾಗದಿರಲು ಮತ್ತು ಅವರ ಜಾಗದಿಂದ ಅವರನ್ನು ಯಾರೂ ಅಲುಗಾಡಿಸದಿರಲು ಇವರು ಗಲಭೆಯನ್ನು ಸೃಷ್ಟಿಸಲು ಮಾತ್ರ ಪ್ರಯತ್ನಿಸುತ್ತಾರೆ. ಅವರೊಂದಿಗೆ ಅಲ್ಲಾಹನು ಹೇಗೆ ವರ್ತಿಸಬೇಕೆಂದು ಅಲ್ಲಾಹನು ಬಲ್ಲನು. ನಾನು ಹೇಳಿದಂತೆ ನಮ್ಮ ಕೆಲಸ ದುಆ ಮಾಡುವುದಾಗಿದೆ. ಎದುರಾಳಿಗಳಿಗಾಗಿಯೂ ದುಆ ಮಾಡಬೇಕು ಎಂದು ಮಸೀಹ್ ಮೌಊದ್(ಅ) ಹೇಳಿದ್ದರ ಬಗ್ಗೆ ನಾನು ಈದ್ ಖುತ್ಬದಲ್ಲೂ ಪ್ರಸ್ತಾಪಿಸಿದ್ದೆ. (ಮಲ್‌ಫೂಝಾತ್, ಸಂಪುಟ-3, ಪುಟ-96)

ನಾವಂತು ದುಆ ಮಾಡುವವರಾಗಿದ್ದೇವೆ. ದುಆ ಮಾಡುತ್ತೇವೆ ಮತ್ತು ಮಾಡುತ್ತಾ ಇರುವೆವು. ಈ ವಿರೋಧವು ಹೊಸ ಸಂಗತಿಯೇನಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಕಾಲದಿಂದಲೇ ಶುರುವಾಗಿದೆ. ಶತ್ರುಗಳು ಅವರ ಗೌರವದ ಮೇಲೆ ಸಹ ಹಲ್ಲೆ ನಡೆಸುತ್ತಾರೆ. ಅವರ ಮಾತುಗಳನ್ನು ಆಲಿಸಲು ಬರುವವರ ಮೇಲೆ ಸಹ ಹಲ್ಲೆ ನಡೆಸುತ್ತಾರೆ. ಅಹ್ಮದಿಯರು ಏನು ಹೇಳುತ್ತಿದ್ದಾರೆ ಎಂದು ನೋಡಲು ಕೆಲವರು ಜಲ್ಸಕ್ಕೆ ಬರುತ್ತಾರೆ. ಅವರ ಬಗ್ಗೆ ಅವರು ನಂಬುವರು ಎಂದು ಹೇಳುವಂತಿಲ್ಲ. ಆದರೆ ಹಝ್ರತ್ ಮಸೀಹ್ ಮೌಊದ್‌ರ(ಅ) ಮಾತುಗಳನ್ನು ಕೇಳಿದರೆ ಈ ಜನರು ಬೈಅತ್ ಮಾಡುವರು ಎಂಬ ಭಯದಿಂದ ಈ ಮೌಲವಿಯರು ಅವರನ್ನೂ ತಡೆಯುತ್ತಾರೆ. ಮಾತ್ರವಲ್ಲ ಆಕ್ರಮಣ ಸಹ ನಡೆಸುತ್ತಾರೆ. ಏಕೆಂದರೆ ಸತ್ಯ ಅಹ್ಮದಿಯರ ಪರವಾಗಿ ಇದೆ ಎಂದು ಅವರಿಗೆ ಗೊತ್ತು. ಹೀಗಿದ್ದರೂ ಹಝ್ರತ್ ಮಸೀಹ್ ಮೌಊದ್(ಅ) ಈ ರೀತಿಯಲ್ಲಿ ಅಡ್ಡಿ ಉಂಟುಮಾಡುವವರಿಗಾಗಿ ಮತ್ತು ಕಠಿಣವಾಗಿ ವರ್ತಿಸುವವರಿಗಾಗಿ ಪ್ರಾರ್ಥನೆಯನ್ನೇ ಮಾಡುತ್ತಿದ್ದರು. ಈ ಪ್ರಾರ್ಥನೆಗಳ ಕಾರಣದಿಂದಲೇ ಅವರಲ್ಲಿ ಕೆಲವರು ಇಷ್ಟೆಲ್ಲ ವಿರೋಧವಿದ್ದರೂ ಜಮಾಅತಿಗೆ ಪ್ರವೇಶಿಸಿದ್ದರು ಮತ್ತು ಇಲ್ಲಿಯ ತನಕ ಪ್ರವೇಶಿಸುತ್ತಿದ್ದಾರೆ. ಒಟ್ಟಿನಲ್ಲಿ, ಮೌಲವಿಯ ಈ ಹೇಳಿಕೆಯ ನಂತರವೂ ನಾವು ವ್ಯರ್ಥವಾಗಿ ಮಾತನಾಡನಾಡುವವರಲ್ಲ ಅಥವಾ ಅವರಂತಹ ಭಾಷೆಯನ್ನು ಉಪಯೋಗಿಸುವವರಲ್ಲ. ನಾವಂತು ದುಆವನ್ನೇ ಮಾಡುವೆವು. ನಾವು ಯಾವಾಗಲೂ ನೋಡುತ್ತಿರುವಂತೆ ಅವರಿಂದಲೇ ಪ್ರೇಮದ ಹನಿಗಳು ಬೀಳುತ್ತಾ ಬಂದಿವೆ ಮತ್ತು ಮುಂದೆಯೂ ತೊಟ್ಟಿಕ್ಕುವುವು. ಜನಸಾಮಾನ್ಯ ಮುಸ್ಲಿಮರಿಗಾಗಿ ಅವರ ಕಠಿಣವಾದ ಮಾತುಗಳನ್ನು ಕೇಳಿದ ನಂತರವೂ ನಾವು ದುಆ ಮಾಡುತ್ತೇವೆ. ಅವರು ಕಷ್ಟತೆಗಳಿಗೆ ಸಿಲುಕುವಾಗ ನಮಗೆ ದುಃಖವಾಗುತ್ತದೆ. ಇದಕ್ಕೆ ಕಾರಣ ಹಝ್ರತ್ ಮಸೀಹ್ ಮೌಊದ್(ರ) ನಮಗೆ ಕಲಿಸಿಕೊಟ್ಟ ಶಿಕ್ಷಣವಾಗಿದೆ. ಸಾಮಾನ್ಯ ಮುಸ್ಲಿಮರು ಮಾಡುತ್ತಿರುವ ದೌರ್ಜನ್ಯಕ್ಕೆ ಕಾರಣ ಅವರ ತಪ್ಪುಗ್ರಹಿಕೆಯಾಗಿದೆ. ಹಝ್ರತ್ ಪೈಗಂಬರರೊಂದಿಗೆ(ಸ) ಇವರಿಗೆ ಇರುವುದಾಗಿ ಇವರು ವಾದಿಸುವ ಪ್ರೇಮದ ಕಾರಣದಿಂದ ಇವರು ಹೀಗೆ ಮಾಡುತ್ತಾರೆ. ಆದ್ದರಿಂದ ಅವರ

ವಿರುದ್ಧ ಶಾಪ ಪ್ರಾರ್ಥನೆ ಮಾಡಬಾರದು ಎಂದು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರೊಡನೆ(ಅ) ನಿರ್ದೇಶಿಸಿದ್ದಾನೆ.

ಇದರ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಘಟನೆಯನ್ನು ಹೀಗೆ ವಿವರಿಸಿರುವರು: ನಾನು ಸಣ್ಣವನಾಗಿದ್ದೆ. ಹಝ್ರತ್ ಮಸೀಹ್ ಮೌಊದ್(ಅ) ಒಂದು ಆಮಂತ್ರಣದಿಂದ ಮರಳಿ ಬರುತ್ತಿದ್ದರು. ಅವರು ಮಾರುಕಟ್ಟೆಯಿಂದ ಸಾಗುತ್ತಿದ್ದಾಗ ಜನರು ಮನೆಯ ಮಾಳಿಗೆಗಳ ಮೇಲೆ ನಿಂತುಕೊಂಡು ಅವರನ್ನು ಬೈಯ್ಯುತ್ತಿದ್ದರು ಮತ್ತು ಮಿರ್ಝಾ ಪರಾರಿಯಾದರು, ಮಿರ್ಝಾ ಪರಾರಿಯಾದರು ಎಂದು ಹೇಳುತ್ತಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನನಗೆ ಏನೂ ಅರ್ಥವಾಗುತ್ತಿರಲಿಲ್ಲ. ಯಾವುದೋ ಜಲ್ಸದಲ್ಲಿ ಭಾಷಣದ ವೇಳೆ ಗಲಭೆಯುಂಟಾದ ಕಾರಣದಿಂದ ಹಝ್ರತ್ ಮಸೀಹ್ ಮೌಊದ್(ಅ) ಮರಳಿ ಬರುತ್ತಿದ್ದರು. ಹೇಗಿದ್ದರೂ ಇದೇ ವೇಳೆ ಒಂದು ಕೈ ಕಡಿಯಲ್ಪಟ್ಟ ಒಬ್ಬ ಮುದುಕನನ್ನು ನಾನು ನೋಡಿದೆನು. ಕಡಿದು ಹೋಗಿದ್ದ ಭಾಗಕ್ಕೆ ತಾಜಾ ಅರಶಿನ ಹಾಕಿದ್ದರಿಂದ ಸ್ವಲ್ಪವೇ ಸಮಯಕ್ಕೆ ಮುಂಚಿತವಾಗಿ ಕೈ ಮುರಿದುಹೋಗಿತ್ತು ಎಂದು ಗೊತ್ತಾಗುತ್ತಿತ್ತು. ಆ ವೃದ್ಧನು ಕೂಡ ತನ್ನ ಆರೋಗ್ಯವಂತ ಕೈಯಿಂದ ಮುರಿದ ಕೈಯ ಮೇಲೆ ಹೊಡೆಯುತ್ತಾ ಪಂಜಾಬಿಯಲ್ಲಿ ಮಿರ್ಝಾ ನಠ್ ಗಯಾ, ಮಿರ್ಝಾ ನಠ್ ಗಯಾ, ಎಂದರೆ ಮಿರ್ಝಾ ಓಡಿಹೋದರು, ಮಿರ್ಝಾ ಓಡಿಹೋದರು ಎಂದು ಹೇಳುತ್ತಿದ್ದನು. ಜೀವಿತದ ಕೊನೆಯ ಈ ಘಟ್ಟದಲ್ಲೂ ಇವನು ಹೀಗೆ ಏಕೆ ಹೇಳುತ್ತಿದ್ದಾನೆ ಎಂದು ಯೋಚಿಸಿ ನಾನು ಅಚ್ಚರಿಗೊಳ್ಳುತ್ತಿದ್ದೆ. ನನಗಂತು ಇದು ಅರ್ಥವಾಗುತ್ತಿರಲಿಲ್ಲ. ಕೇವಲ ವಿರೋಧದ ಕಾರಣದಿಂದ, ಮೌಲವಿಗಳು ಜನರನ್ನು ರೊಚ್ಚಿಗೆಬ್ಬಿಸಿದ್ದ ಕಾರಣದಿಂದ ಮನಸ್ಸಿಗೆ ಬಂದದನ್ನು ಜನರು ಹೇಳುತ್ತಿದ್ದರು. ಸಂಗತಿ ಏನೆಂದು ಗೊತ್ತಿದ್ದರೂ ಗೊತ್ತಿಲ್ಲದಿದ್ದರೂ ಏನಾದರೂ ಹೇಳುತ್ತಾ ಹೋಗುತ್ತಿದ್ದರು.

ಇನ್ನೊಂದು ಘಟನೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂದು ಸಲ ಹಝ್ರತ್ ಮಸೀಹ್ ಮೌಊದ್(ಅ) ಲಾಹೋರ್ ಪಟ್ಟಣಕ್ಕೆ ಹೋಗುತ್ತಿದ್ದರು. ಆಗ ಹಿಂದಿನಿಂದ ಯಾರೋ ಅವರ ಮೇಲೆ ಹಲ್ಲೆ ನಡೆಸಿದರು ಮತ್ತು ಅವರು ಕೆಳಗೆ ಬಿದ್ದರು. ಎಡವಿ ಬಿದ್ದಿದ್ದರು ಕೆಳಗೆ ಬಿದ್ದಿರಲಿಲ್ಲವೆಂದೂ ಕೆಲವು ವರದಿಗಳಲ್ಲಿ ಬಂದಿದೆ. (ಸೀರತ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಹಝ್ರತ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ್(ರ) ಪುಟ–442) ಜನರು ಕಲ್ಲುಗಳನ್ನು ಸಹ ತೂರುತ್ತಿದ್ದದ್ದನ್ನು ನಾವು ನೋಡಿದ್ದೇವೆ.

ಒಟ್ಟಿನಲ್ಲಿ ಆ ದಿನಗಳಲ್ಲಿ ಕಠಿಣವಾದ ವಿರೋಧವಿತ್ತು. ಅಂತೂ ಈ ಜನರು ಯಾವುದೇ ಕಾರಣವಿಲ್ಲದೆ ಹೀಗೆ ಏಕೆ ಮಾಡುತ್ತಾರೆ ಎಂದು ಯೋಚಿಸಿ ಸಹಜವಾಗಿಯೇ ಜಮಾಅತಿನ ಕೆಲವು ಸಹೋದರರಿಗೆ ಕೋಪ ಸಹ ಬರುತ್ತಿತ್ತು. ಆಗ ಹಝ್ರತ್ ಮಸೀಹ್ ಮೌಊದ್‌ರಿಗೆ(ಅ) ಹೀಗೆ ಇಲ್‌ಹಾಂ ಲಭಿಸಿತು:

**ಏ ದಿಲ್ ತೂ ನೀಝ್ ಖಾತಿರೇ ಈನಾನ್ ನಿಗಾಹ್‌ದಾರ್.**

**ಕ ಆಖಿರ್ ಕುನಂದ್ ದಅ್‌ವೇ ಹುಬ್ಬೇ ಪೈಯಂಬರಂ.**

(ಇಝಾಲ ಔಹಾಮ್, ಭಾಗ–1, ರೂಹಾನಿ ಖಝಾಇನ್ ಸಂಪುಟ–3, ಪುಟ–182)

ಎಂದರೆ, ಹೇ ನಮ್ಮ ಸಂದೇಶವಾಹಕ, ನಿಮ್ಮನ್ನು ಬೈಯ್ಯುವ ಮುಸ್ಲಿಮರನ್ನು ಕಡೆಗಣಿಸಬೇಡ. ಏಕೆಂದರೆ, ಮುಹಮ್ಮದ್ ಪೈಗಂಬರರೊಂದಿಗೆ(ಸ) ಇವರಿಗೆ ಇರುವ ಪ್ರೇಮದ ಕಾರಣದಿಂದಲೇ ಇವರು ನಿಮ್ಮನ್ನು ಬೈಯ್ಯುತ್ತಾರೆ, ಹೊಡೆಯಲು ಮುಂದಾಗುತ್ತಾರೆ. ಆದ್ದರಿಂದ ಅವರ ವಿರುದ್ಧ ಶಾಪ ಪ್ರಾರ್ಥನೆ ಮಾಡಬೇಡ.

ಒಟ್ಟಿನಲ್ಲಿ, ನಮ್ಮ ವಿರೋಧದ ಹಿಂದೆ ಕಾರಣವೇನೆಂದು ನೋಡಬೇಕು. ಇವರು ನಮ್ಮನ್ನು ಬೈಯ್ಯುತ್ತಾರೆ ಮತ್ತು ಅಹ್ಮದಿಯರ ಚಹಾ ಸಾರಾಯಿಗಿಂತ ನಿಕೃಷ್ಟವೆಂದು ಎಂದು ಹೇಳುತ್ತಾರೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಮ್ಮೊಳಗೆ ಹಝ್ರತ್ ಪೈಗಂಬರರೊಂದಿಗೆ(ಸ) ಇರುವ ಪ್ರೇಮದ ಬೆಂಕಿ ಉರಿಯುತ್ತಿದೆ ಎಂದು ಅವರಿಗೆ ಗೊತ್ತಾದರೆ ಬೇಗನೇ ಅವರು ಅಹ್ಮದಿಯರ ಪಾದಗಳಲ್ಲಿ ಬೀಳುವರು. ನಾವು ಹಝ್ರತ್ ಪೈಗಂಬರರ(ಸ) ವಿರೋಧಿಗಳಾಗಿದ್ದೇವೆ ಎಂದು ಭಾವಿಸುವುದರಿಂದ ಅವರು ನಮ್ಮನ್ನು ಎದುರಿಸುತ್ತಾರೆ. ಇದು ಕೆಲವು ತಪ್ಪುಗ್ರಹಿಕೆಯ ಕಾರಣದಿಂದಾಗಿದೆ.

ಅನಂತರ ತನ್ನ ಒಂದು ವಿವರಣೆಯನ್ನು ನೀಡಿದ ನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಈ ಜನರು ನನ್ನನ್ನು ಅಥವಾ ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ವಿರೋಧಿಸುತ್ತಿರುವುದಾದರೂ ಬೈಯ್ಯುತ್ತಿರುವುದಾದರೂ, ಅವರು ನಮ್ಮ ಸಹೋದರರಾಗಿರುವರು ಎಂದು ನೀವು ನೆನಪಿಡಬೇಕು. ಅವರು ಯಾವುದೋ ತಪ್ಪುಗ್ರಹಿಕೆಗೆ ಒಳಪಟ್ಟಿರುವರು. ಆದ್ದರಿಂದ ನೀವು ನಿರಾಶೆ ಹೊಂದುವುದಕ್ಕೆ ಬದಲಾಗಿ ದುಆ ಮಾಡಬೇಕು ಮತ್ತು ವಿರೋಧಿಸುವವರಿಗೆ ನಿಜಸ್ಥಿತಿಯ ಬಗ್ಗೆ ತಿಳಿಸಿಕೊಡಬೇಕು. ನೀವು ಯಥಾರ್ಥ ಸಂಗತಿಯನ್ನು ತಿಳಿಸಿಕೊಡುವುದಾದರೆ, ನಾವು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶತ್ರುಗಳಲ್ಲ, ಬದಲಾಗಿ ಹಝ್ರತ್ ಪೈಗಂಬರರ(ಸ) ನೈಜ ಪ್ರೇಮಿಗಳಾಗಿದ್ದೇವೆ ಎಂದು ಅವರಿಗೆ ಗೊತ್ತಾಗುವುದು. ಹೀಗಾದರೆ, ನಮ್ಮನ್ನು ಕೊಲ್ಲಲು ಬರುವ ಈ ಜನರು ನಮಗಾಗಿ ಜೀವಕೊಡಲು ತಯಾರಾಗುವರು. (ಭೇರ ಕೀ ಸರ್‌ಝಮೀನ್ ಪರ್ ಏಕ್ ಈಮಾನ್ ಅಫ್ರೋಝ್ ತಖ್ರೀರ್, ಅನ್ವಾರುಲ್ ಉಲೂಮ್ ಸಂಪುಟ–22, ಪುಟ–84–86)

ಹೇಗಿದ್ದರೂ, ನಾನು ಮೊದಲು ಹೇಳಿದಂತೆ ನಾವು ನಮ್ಮ ವಿರೋಧಿಗಳಿಗಾಗಿ ದುಆ ಮಾಡಬೇಕು. ದುಆ ಮಾಡಲು ಹಝ್ರತ್ ಮಸೀಹ್ ಮೌಊದ್(ಅ) ನಮಗೆ ಕಲಿಸಿಕೊಟ್ಟಿದ್ದಾರೆ. ಅವರಿಂದಲೇ ಪ್ರೇಮದ ಹನಿಗಳು ತೊಟ್ಟಿಕ್ಕುವುವು ಮತ್ತು ಅವರಿಂದಲೇ ಜನರು ವಿಶ್ವಾಸ ಕೈಗೊಳ್ಳುವರು.

ಹಝ್ರತ್ ಮೌಲವಿ ಅಬ್ದುಲ್‌ಕರೀಂ ಸಾಹಿಬ್‌ರ ಒಂದು ಘಟನೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಮೌಲವಿ ಅಬ್ದುಲ್‌ಕರೀಂ ಸಾಹಿಬ್ ಹೇಳುತ್ತಾರೆ: ನಾನು ಮನೆಯ ಮೇಲಿನ ಮಹಡಿಯಲ್ಲಿ ತಂಗಿದ್ದೆ. ಹಝ್ರತ್ ಮಸೀಹ್ ಮೌಊದ್(ಅ) ಮನೆಯ ಕೆಳಗೆ ಅಂತಸ್ತಿನಲ್ಲಿ ಇರುತ್ತಿದ್ದರು. ಒಂದು ರಾತ್ರಿ, ಪ್ರಸವ ವೇದನೆಯಿಂದ ಸ್ತ್ರೀಯೊಬ್ಬಳು ಅಳುವಂತಹ ಶಬ್ದ ನನಗೆ ಕೆಳಗಿನ ಅಂತಸ್ತಿನಿಂದ ಕೇಳಿಬಂತು. ನನಗೆ ಅಚ್ಚರಿಯಾಯಿತು. ನಾನು ಕಿವಿಗೊಟ್ಟು ಬರುತ್ತಿರುವ ಸ್ವರವನ್ನು ಆಲಿಸಿದೆ. ಹಝ್ರತ್ ಮಸೀಹ್ ಮೌಊದ್(ಅ) ದುಆ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಾಯಿತು. "ಹೇ ಅಲ್ಲಾಹ್, ಪ್ಲೇಗ್ ರೋಗ ಹರಡಿದೆ. ಜನರು ಇದರ ಕಾರಣದಿಂದ ಸಾಯುತ್ತಿದ್ದಾರೆ. ಇವರೆಲ್ಲರೂ ಮೃತಪಟ್ಟರೆ ನಿನ್ನನ್ನು ಯಾರು ನಂಬುವರು" ಎಂದು ಅವರು ದುಆ ಮಾಡುತ್ತಿದ್ದರು. ನೋಡಿರಿ, ಪ್ಲೇಗ್ ರೋಗವು ಹಝ್ರತ್ ಪೈಗಂಬರ್(ಸ) ಭವಿಷ್ಯ ನುಡಿದಿದ್ದ ಒಂದು ಚಿಹ್ನೆಯಾಗಿತ್ತು. ಪ್ಲೇಗ್ ರೋಗದ ದೃಷ್ಟಾಂತ ಹಝ್ರತ್ ಮಸೀಹ್ ಮೌಊದ್‌ರ(ಅ) ಭವಿಷ್ಯವಾಣಿಯೂ ಆಗಿದೆ. ಆದರೆ ಯಾರ ಸತ್ಯತೆಯನ್ನು ಪ್ರಕಟಗೊಳಿಸಲಿಕ್ಕಾಗಿ ಈ ಪ್ಲೇಗ್ ರೋಗ ಬಂದಿತ್ತೋ ಅದೇ ವ್ಯಕ್ತಿ ಅಲ್ಲಾಹನ ಮುಂದೆ ವಿನಮ್ರತೆಯಿಂದ ಅಂಗಲಾಚುತ್ತಾ ಹೀಗೆ ದುಆ ಮಾಡುತ್ತಾರೆ: ಹೇ ಅಲ್ಲಾಹ್, ಈ ಜನರು ಮೃತಪಟ್ಟರೆ ನಿನ್ನನ್ನು ಯಾರು ನಂಬುವರು? ಆದ್ದರಿಂದ ಸತ್ಯವಿಶ್ವಾಸಿಗಳು ಜನಸಾಮಾನ್ಯರ ವಿರುದ್ಧ ಶಾಪ ಪ್ರಾರ್ಥನೆ ಮಾಡಬಾರದು. ಏಕೆಂದರೆ ಸತ್ಯವಿಶ್ವಾಸಿ ಅವರನ್ನು ರಕ್ಷಿಸಲು ನಿಲ್ಲಬೇಕು. ಜನಸಾಮಾನ್ಯರನ್ನು ರಕ್ಷಿಸುವುದೇ ಒಬ್ಬ ಸತ್ಯವಿಶ್ವಾಸಿಯ ಕೆಲಸವಾಗಿದೆ. ಸತ್ಯವಿಶ್ವಾಸಿಯೇ ಜನಸಾಮಾನ್ಯರ ವಿರುದ್ಧ ಶಾಪ ಪ್ರಾರ್ಥನೆ ಮಾಡಿದರೆ ಅವರನ್ನು ಯಾರು ರಕ್ಷಿಸುವರು? ಆ ಶಾಪ ಪ್ರಾರ್ಥನೆ ಸ್ವೀಕಾರವಾದರೆ ಎಲ್ಲರೂ ಸತ್ತೇ ಹೋಗುವರು.

ಇಸ್ಲಾಮನ್ನು ಸಂರಕ್ಷಿಸಲು ಮತ್ತು ಮುಸ್ಲಿಮರನ್ನು ರಕ್ಷಿಸಲು ಹಾಗೂ ಮನುಷ್ಯತ್ವದ ಮಹತ್ವವನ್ನು ಅವರಿಗೆ ಮರಳಿಕೊಡಲಿಕ್ಕಾಗಿ ಅಹ್ಮದಿಯ್ಯತ್ ಸ್ಥಾಪಿತವಾಗಿದೆ. ಯಾರನ್ನು ಉನ್ನತ ಸ್ಥಾನಕ್ಕೆ ತಲುಪಿಸಲು ನಮ್ಮನ್ನು ಎಬ್ಬಿಸಲಾಗಿದೆಯೋ ಅವರ ವಿರುದ್ಧ ನಾವು ಶಾಪ ಪ್ರಾರ್ಥನೆ ಮಾಡುವುದು ಹೇಗೆ? ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನಿಗೆ ಹಝ್ರತ್ ಮಸೀಹ್ ಮೌಊದ್‌ರ(ಅ) ಮೇಲೆ ಹೆಚ್ಚಿನ ಅಭಿಮಾನವಿದೆ. ಹೀಗಿದ್ದರೂ ಹಝ್ರತ್ ಮಸೀಹ್ ಮೌಊದ್‌ರ(ಅ) ಹೃದಯವನ್ನು ಸಂಬೋಧಿಸುತ್ತಾ ಅಲ್ಲಾಹನು ಹೇಳುತ್ತಾನೆ:

**ಏ ದಿಲ್ ತೂ ನೀಝ್ ಖಾತಿರೇ ಈನಾನ್ ನಿಗಾಹ್‌ದಾರ್.**

**ಕ ಆಖಿರ್ ಕುನಂದ್ ದಅ್‌ವೇ ಹುಬ್ಬೇ ಪೈಯಂಬರಂ.**

ಹೇ ನಮ್ಮ ಸಂದೇಶವಾಹಕ, ನಿಮ್ಮನ್ನು ಬೈಯ್ಯುವ ಮುಸ್ಲಿಮರನ್ನು ಕಡೆಗಣಿಸಬೇಡ. ಏಕೆಂದರೆ, ಮುಹಮ್ಮದ್ ಪೈಗಂಬರರೊಂದಿಗೆ(ಸ) ಇವರಿಗೆ ಇರುವ ಪ್ರೇಮದ ಕಾರಣದಿಂದಲೇ ಇವರು ನಿಮ್ಮನ್ನು ಬೈಯ್ಯುತ್ತಾರೆ, ಹೊಡೆಯಲು ಮುಂದಾಗುತ್ತಾರೆ. ಆದ್ದರಿಂದ ಅವರ ವಿರುದ್ಧ ಶಾಪ ಪ್ರಾರ್ಥನೆ ಮಾಡಬೇಡ. ಇದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಮನಸ್ಸಿಗೆ ಸಂಬೋಧಿಸುತ್ತ ಅವರ ತುಟಿಯಿಂದ ಹೇಳಿಸುತ್ತಾನೆ. ಹಝ್ರತ್ ಮುಸ್ಲಿಹ್ ಮೌಊದ್(ರ)ರವರು ಭೇರದಲ್ಲಿ ಭಾಷಣ ಮಾಡಿರಬಹುದು. ಈ ಪಂಕ್ತಿಯನ್ನು ಪ್ರಸ್ತಾಪಿಸುತ್ತ ಇದು ಮತ್ತೊಮ್ಮೆ ಬೇರೆಯ ಘಟನೆ ಆಗಿದೆ. ಮೊದಲನೆಯದ್ದು ಬೇರೆ ಘಟನೆ ಆಗಿತ್ತು. ಅದು ಲಾಹೋರಿನ ಘಟನೆ ಆಗಿತ್ತು ಇದು ಭೇರದ ಘಟನೆಯಾಗಿದೆ. ಅವರು ಹೇಳುತ್ತಾರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಮನಸ್ಸಿಗೆ ಸಂಬೋಧಿಸುತ್ತ ಅವರ ತುಟಿಗಳಿಂದ ಹೇಳಿಸಿದನು ಹೇ ನನ್ನ ಮನಸ್ಸೆ, ನಿಮ್ಮನ್ನು ಬೈಯ್ಯುವ ಮುಸ್ಲಿಮರನ್ನು ಕಡೆಗಣಿಸಬೇಡ. ಏಕೆಂದರೆ, ಮುಹಮ್ಮದ್ ಪೈಗಂಬರರೊಂದಿಗೆ(ಸ) ಇವರಿಗೆ ಇರುವ ಪ್ರೇಮದ ಕಾರಣದಿಂದಲೇ ಇವರು ನಿಮ್ಮನ್ನು ಬೈಯ್ಯುತ್ತಾರೆ, ಹೊಡೆಯಲು ಮುಂದಾಗುತ್ತಾರೆ. ಆದ್ದರಿಂದ ಅವರ ವಿರುದ್ಧ ಶಾಪ ಪ್ರಾರ್ಥನೆ ಮಾಡಬೇಡ. ಇದು ಮೂಲ ವಿಷಯವಾಗಿದೆ. ನಮ್ಮ ವಿರೋಧಿಗಳಲ್ಲಿ ಒಂದು

ಭಾಗ ಅನಾವಶ್ಯಕವಾಗಿ ವಿರೋಧಿಸುತ್ತಿರುವುದರ ಬಗ್ಗೆ ನಮಗೆ ಅರಿವಿದೆ ಆದರೆ ಒಂದು ಭಾಗ ಅವರ ಬಲೆಯಲ್ಲಿ ಸಿಕ್ಕಿಕೊಂಡಿದೆ. ಆದ್ದರಿಂದ ಅವರು ನಮ್ಮನ್ನು ವಿರೋಧಿಸುತ್ತಾರೆ. ಪಾಕಿಸ್ತಾನದಲ್ಲಿ ಅಥವಾ ಬೇರೆ ರಾಷ್ಟ್ರಗಳಲ್ಲಿ ಇರುವ ಜನರು ಸಹ ಅವರ ಈ ಬಲೆಯಲ್ಲಿ ಸಿಕ್ಕಿಕೊಂಡಿದ್ದಾರೆ. ಇದೇ ಸತ್ಯ ಸಂಗತಿಯಾಗಿದೆ. ನಾವು ಹಝ್ರತ್ ಪೈಗಂಬರ್‌ರನ್ನು(ಸ) ಪ್ರೀತಿಸುವವರಾಗಿದ್ದೇವೆ ಎಂದು ಇವರಿಗೆ ಗೊತ್ತಾದರೆ, ಅಹ್ಮದಿಯರು ಹಝ್ರತ್ ಪೈಗಂಬರರ(ಸ) ಗೌರವವನ್ನು ಕಾಪಾಡುವವರಾಗಿರುವರು ಆದ್ದರಿಂದ ಅವರನ್ನು ಸಹಾಯ ಮಾಡಬೇಕು ಎಂದು ಈ ಜನರು ಹೇಳುವರು. ಅಂತಹ ಒಂದು ದಿನ ಖಂಡಿತ ಬರುವುದು. ಇನ್‌ಶಾ ಅಲ್ಲಾಹ್. ಕೊನೆಗೂ ತಪ್ಪುಗ್ರಹಿಕೆಗಳು ಎಷ್ಟು ಕಾಲ ಬಾಕಿಯಾಗಿ ಉಳಿಯುವುವು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಬ್ಬ ಆಂಗ್ಲೇಯ ಲೇಖಕ ಬರೆಯುತ್ತಾನೆ: ನೀವು ಲೋಕವನ್ನು ಕೆಲವು ದಿನಗಳಿಗೆ ಮೋಸ ಮಾಡಬಲ್ಲಿರಿ ಅಥವಾ ಕೆಲವು ಜನರನ್ನು ಸದಾ ಕಾಲಕ್ಕೆ ಮೋಸಮಾಡಬಲ್ಲಿರಿ. ಆದರೆ ಲೋಕದ ಎಲ್ಲರನ್ನು ಸದಾ ಕಾಲಕ್ಕೆ ಮೋಸಮಾಡಲಾಗದು. ಸತ್ಯವು ಇದೇ ಆಗಿದೆ. ಸತ್ಯವು ಮೆಲ್ಲಮೆಲ್ಲನೆ ತೆರೆದು ಮುಂದೆ ಬರುತ್ತದೆ. ಈಗ ನಾವು ಇದನ್ನೇ ನೋಡುತ್ತಿದ್ದೇವೆ. ಕೆಲವು ಮೌಲವಿಯರ ಮೋಸಕ್ಕೆ ಒಳಗಾದ, ಅವರ ಮಾತುಗಳನ್ನು ಕೇಳಿದ ಜನರಿಂದಲೇ ಕೆಲವರು ಅಹ್ಮದಿಯರಾದರು. ಅಹ್ಮದಿಯರ ಸಂಖ್ಯೆ ಎಲ್ಲಿಂದ ವರ್ಧಿಸುತ್ತಿದೆ. ಮೊದಲು ವಿರೋಧಿಗಳ ಜೊತೆಗೆ ಇದ್ದ ಜನರಿಂದಲೇ ವರ್ಧಿಸುತ್ತಿದೆ. (ಖುತ್ಬಾತೆ ಮಹ್ಮೂದ್, ಸಂಪುಟ–33, ಪುಟ–221–223, ಖುತ್‌ಬ ಜುಮ್‌ಅ 18–07–1952)

ಆದ್ದರಿಂದ ವಿರೋಧ ಒಂದು ದಿನ ಕೊನೆಗೊಳ್ಳುವುದು ಮತ್ತು ಅವರಿಂದಲೇ ಜನರು ಬಂದು ಹಝ್ರತ್ ಮಸೀಹ್ ಮೌಊದ್‌ರ(ಅ) ಬೈಅತ್ ಮಾಡುವರು. ಹಲವು ಜನರು ನನಗೂ ಬರೆಯುತ್ತಾರೆ. ಈಗಲೂ ಹೀಗೆ ಬರೆಯುತ್ತಾರೆ. ನಾವು ಅಹ್ಮದಿಯ್ಯತ್ತನ್ನು ವಿರೋಧಿಸಿದ ನಂತರ ನಮ್ಮೊಡನೆ ದುಆ ಮಾಡಲು ಮತ್ತು ಅಹ್ಮದಿಯಾ ಸಾಹಿತ್ಯಗಳನ್ನು ಓದಲು ಹೇಳಲಾಯಿತು. ನಾವು ದುಆ ಮಾಡಿದೆವು ಮತ್ತು ಸಾಹಿತ್ಯಗಳನ್ನು ಓದಿದೆವು. ಆಗ ಸತ್ಯದ ಅರಿವಾಯಿತು. ಈಗ ನಾವು ಬೈಅತ್ ಮಾಡಲು ಬಯಸುತ್ತೇವೆ ಅಥವಾ ಬೈಅತ್ ಮಾಡಿಕೊಂಡು ಜಮಾಅತಿಗೆ ಪ್ರವೇಶಿಸಿದ್ದೇವೆ. ಇಂತಹ ಘಟನೆಗಳು ಸದಾ ನಡೆಯುತ್ತಾ ಬಂದಿವೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ಇದರ ಬಗ್ಗೆ ಬರೆದಿರುವರು. ಇತರ ಖಲೀಫರು ಸಹ ಬರೆದಿರುವರು. ಹಲವಾರು ಜನರು ಈ ರೀತಿಯಲ್ಲಿ ಪತ್ರಗಳನ್ನು ಬರೆಯುತ್ತಿದ್ದರು. ಈಗಲೂ ಹೀಗೆಯೇ ಆಗುತ್ತಿವೆ.

ಒಟ್ಟಿನಲ್ಲಿ, ನಮ್ಮ ಮೂಲಕ ಅಹ್ಮದಿಯ್ಯತ್ತಿನ ಸಂದೇಶ ತಲುಪಲು ಸಾಧ್ಯವಿಲ್ಲದ ವಿಭಾಗಕ್ಕೆ ವಿಶೇಷವಾಗಿ ಅಹ್ಮದಿಯತ್ತಿನ ಸಂದೇಶವನ್ನು ಈ ಮೌಲವಿಗಳು ನಮ್ಮ ವಿರುದ್ಧ ಹೇಳಿಕೆ ನೀಡುವುದರಿಂದ ತಲುಪಿಸುತ್ತಿದ್ದಾರೆ. ಇವರು ನಮ್ಮ ಕೆಲಸವನ್ನು ಮಾಡುತ್ತಿದ್ದಾರೆ ಮತ್ತು ಇದು ನಮ್ಮ ಪ್ರಯೋಜನಕ್ಕಾಗಿದೆ. ನಾವು ಅವರಿಗಾಗಿಯೂ ದುಆ ಮಾಡುತ್ತೇವೆ. ಅವರಲ್ಲಿ ಸಭ್ಯತೆಯ ಮತ್ತು ಒಳ್ಳೆಯತನದ ಏನಾದರೂ ಅಂಶವಿದ್ದರೆ ಅಲ್ಲಾಹನು ಅವರಿಗೆ ಬುದ್ಧಿಕೊಡಲಿ, ಅವರಿಗೆ ಸತ್ಯದ ಅರಿವಾಗಲಿ. ಆದರೆ ಜನಸಾಮಾನ್ಯರಿಗಾಗಿ ಮತ್ತು ಸಾಮಾನ್ಯ ಮುಸ್ಲಿಮರಿಗಾಗಿ ಹೆಚ್ಚು ದುಆ ಮಾಡಬೇಕು. ಅಲ್ಲಾಹನು ಅವರನ್ನು ಮೌಲವಿಗಳ ಮುಷ್ಟಿಯಿಂದ ಮುಕ್ತಿ ನೀಡಲಿ.

ಹೇಗಿದ್ದರೂ ಇವರು ನಮ್ಮ ಪ್ರಯೋಜನಕ್ಕಾಗಿ ವಿರೋಧವನ್ನು ಮಾಡುತ್ತಾರೆ. ಮೊದಲು ತಲುಪದಂತಹ ಸ್ಥಳಗಳಿಗೆ ಅಥವಾ ನಮ್ಮ ಮೂಲಕ ತಲುಪದಂತಹ ಸ್ಥಳಗಳಿಗೆ ಅಹ್ಮದಿಯ್ಯತ್ತಿನ ಸಂದೇಶವನ್ನು ಇವರು ತಲುಪಿಸುತ್ತಿದ್ದಾರೆ. ಅವರಲ್ಲಿ ಕೆಲವರು ಸ್ವತಃ ನಮ್ಮನ್ನು ಸಂಪರ್ಕಿಸುತ್ತಾರೆ. ಆದ್ದರಿಂದ ನಮ್ಮ ಕೆಲಸ ದುಆ ಮಾಡುವುದಾಗಿದೆ ಮತ್ತು ಸಹನೆ ಕೈಗೊಳ್ಳುವುದಾಗಿದೆ. ನಮಗೆ ವಿಜಯವನ್ನು ನೀಡುವಂತಹ ಅತ್ಯುತ್ತಮ ಮಾರ್ಗವು ಇದೇ ಆಗಿದೆ. ಇನ್‌ಶಾ ಅಲ್ಲಾಹ್. ಮುಸ್ಲಿಮರ ಬಗ್ಗೆ ನಮಗೆ ಉತ್ತಮ ಮತ್ತು ಶುದ್ಧವಾದ ಆಲೋಚನೆಗಳು ಮತ್ತು ನಮ್ಮ ಭಾವನೆಗಳು ಇರಬೇಕು. ಅಲ್ಲಾಹನು ಅವರ ಕಣ್ಣುಗಳನ್ನು ತೆರೆಯಲಿ ಮತ್ತು ಅವರು ಕಾಲಘಟ್ಟದ ಇಮಾಮನ್ನು ನಂಬುವವರೂ ಅರಿಯುವವರೂ ಆಗಲಿ ಎಂದು ಅವರಿಗಾಗಿ ದುಆ ಮಾಡಬೇಕು.

*****************

## ವಿಶೇಶ ಸೂಚನೆ

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**
**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

## ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಖಃ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಡ್ಡಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವರ್ಷಕ್ಕಿಂತ ಹೆಚ್ಚು ಸಮಯದಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮಯಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖದಿಯಾನಿ ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಉಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 1.5 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರಿವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಶವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೇಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಮಿರ್ಝಾ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಷೇಶವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿಮೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 8050330779, 9866358609 (ವ್ಯವಸ್ಥಾಪಕರು)

## ಸೂಚನೆ

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.
**email: www.kannadabadar@gmail.com**
**Mob or whatsapp: 8050330779**

(ಪುಟ ಸಂಖ್ಯೆ 12ರ ಉಳಿದ ಭಾಗ)

ಕೆಲಸಗಳು ಸಿಲುಕಿಕೊಂಡಿದ್ದವು. ಆದರೆ ಅಹ್ಮದಿ ಆದ ನಂತರ ನನ್ನ ಎಲ್ಲ ಕೆಲಸಗಳು ನಿರಾಳವಾದವು ಮತ್ತು ದಿನನಿತ್ಯ ಅಲ್ಲಾಹನ ದೃಷ್ಟಾಂತಗಳನ್ನು ಕಾಣುತ್ತಿದ್ದೇನೆ.

ನಾನು ಅಹ್ಮದಿ ಆದ ನಂತರ ನೆಮ್ಮದಿ ಮತ್ತು ಮನಶ್ಯಾಂತಿ ಅನುಭವಿಸುತ್ತಿದ್ದೇನೆ. ಜಲ್ಸದ ಪರಿಸರ ತುಂಬ ಮೆಚ್ಚುಗೆಯಾಯಿತು. ಕೆಲಸಗಳ ಬಗ್ಗೆ ತುಂಬ ಆತಂಕಗಳಿದ್ದವು. ಆದರೆ ಬೈಅತ್ ಮಾಡಿದಾಗಿನಿಂದ ನಿರಾಳತೆ ಕಂಡು ಬರುತ್ತಿವೆ. ಬರುವ ಮುಂಚೆ ಕೆಲಸ ಒಂದರ ಬೇಡಿಕೆ ಬಂತು.

ಇದೀಗ ಜಲ್ಸದಲ್ಲಿ ಬಂದು ನನಗೆ ತುಂಬ ಆಶ್ಚರ್ಯವಾಗುತ್ತಿದೆ. ಇಷ್ಟೊಂದು ಜನರು ಒಂದೇ ಜಾಗದಲ್ಲಿ ಸುವ್ಯವಸ್ಥಿತವಾಗಿ ಕುಳಿತುಕೊಂಡಿದ್ದರೆ. ಯಾವುದೇ ರೀತಿಯ ಜಗಳವಿಲ್ಲ. ಗಲಾಟೆಯೂ ಇಲ್ಲ.

**6 ಜೂನ್ 2015**

**ವಿವಿಧ ತಂಡಗಳೊಡನೆ ಭೇಟಿಯ ಕಾರ್ಯಕ್ರಮ**

ಇಂದಿನ ಕಾರ್ಯಕ್ರಮದನ್ವಯ ತುರ್ಕಿ ದೇಶದ ಜಮಾಅತ್ ಸದಸ್ಯರನ್ನೊಳಗೊಂಡ ತಂಡ ಹಾಗೂ ಸಲೋನಿಯಾದಿಂದ ಬಂದ ತಂಡ ಮತ್ತು ಅರಬ್ ಬಾಂಧವರೊಡನೆ ಭೇಟಿಯ ಕಾರ್ಯಕ್ರಮವಿತ್ತು. 8 ಗಂಟೆಗೆ ಹುಝೂರ್ ಆಗಮಿಸಿದರು ಮತ್ತು ಭೇಟಿಯ ಸರಣಿ ಪ್ರಾರಂಭವಾಯಿತು.

ಭೇಟಿಯ ಪ್ರಾರಂಭದಲ್ಲಿ ಹುಝೂರ್ ಎಲ್ಲ ಸದಸ್ಯರ ಕುಶಲೋಪರಿ ವಿಚಾರಿಸಿದರು. ಆಗ ಪ್ರತಿಯೊಬ್ಬರು ಇಂದು ಅವರಿಗೆ ಹುಝೂರರೊಡನೆ ಭೇಟಿಯಾಗುವ ಭಾಗ್ಯ ದೊರೆತ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು. ತಂಡದ ಸದಸ್ಯರೆಲ್ಲರೂ ಜಲ್ಸದಲ್ಲಿರುವ ಶಿಸ್ತು ಅಚ್ಚುಕಟ್ಟತನ ಮತ್ತು ಪರಸ್ಪರ ಐಕ್ಯತೆ ಹಾಗೂ ಭ್ರಾತೃತ್ವದ ಕುರಿತು ಕೊಂಡಾಡಿದರು.

* ಅಹ್ಮದಿ ಮಿತ್ರರೊಬ್ಬರು ಹುಝೂರರೊಡನೆ ಸಂಬೋಧಿಸಿ ಹೇಳಿದರು. ಹುಝೂರ್ ನಾನು ನಿಮ್ಮನ್ನು ಪ್ರೀತಿಸುತ್ತೇನೆ, ಆಗ ಹುಝೂರ್ ಹೇಳಿದರು. ನಾನೂ ನಿಮ್ಮನ್ನು ಪ್ರೀತಿಸುತ್ತೇನೆ.

* ಒಂದು ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ಹಝ್ರತ್ ರಸೂಲುಲ್ಲಾಹ್(ಸ) ಭವಿಷ್ಯವಾಣಿ ನುಡಿದಿದ್ದರು. ಮುಸಲ್ಮಾನರಲ್ಲಿ ಬಹಳಷ್ಟು ಪಂಗಡಗಳಾಗುವುದು ಮತ್ತು ಹಝ್ರತ್ ರಸೂಲುಲ್ಲಾಹ್(ಸ) ಮಸೀಹ್ ಮೌಊದರ ಅಂತಿಮ ಕಾಲದಲ್ಲಿ ಆಗಮಿಸುವ ಕುರಿತು ಭವಿಷ್ಯ ನುಡಿದಿದ್ದರು. ಎಲ್ಲ ಮುಸ್ಲಿಮರು ಆ ಮಸೀಹ್ ಮಹದಿಯ ಪ್ರತೀಕ್ಷೆ ಮಾಡುತ್ತಿದ್ದಾರೆ. ಆದರೆ ಅಹ್ಮದಿಯಾ ಜಮಾಅತಿನ ವಿಶ್ವಾಸವಾಗಿದೆ ಹಝ್ರತ್ ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿ ಪ್ರಕಾರ ಆಗಮಿಸಬೇಕಾದ ಮಸೀಹ್ ಮತ್ತು ಮಹದಿ ಬಂದಾಗಿದೆ ಮತ್ತು ಅವರನ್ನು ನಾವು ಸ್ವೀಕರಿಸಿರುವೆವು.

ಹುಝೂರ್ ಹೇಳಿದರು. ಹಝ್ರತ್ ಮಸೀಹ್ ಮೌಊದ್(ಅ) ಎಲ್ಲ ಧರ್ಮಗಳನ್ನು ಒಂದು ಕೈಯಲ್ಲಿ ಒಟ್ಟುಗೂಡಿಸಲು ಬಂದಿದ್ದರು ಏಕ ಜನಾಂಗವನ್ನಾಗಿ ಮಾಡಲು ಬಂದಿದ್ದರು. ಅವರ ನಿಧನ ನಂತರ ಖಿಲಾಫತ್ ಸರಣಿ ಪ್ರಾರಂಭವಾಯಿತು. ಮತ್ತು ಅವರನ್ನು ನಂಬುವವರ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಾ ಹೋಯಿತು. ಇಂದು ಅಲ್ಲಾಹನ ಅನುಗ್ರಹದಿಂದ ಪ್ರತಿ ವರ್ಷ ಲಕ್ಷಗಟ್ಟಲೆ ಮುಸ್ಲಿಮರು ಅಹ್ಮದಿಯಾ ಜಮಾಅತಿನಲ್ಲಿ ಸೇರುತ್ತಿದ್ದಾರೆ ನಮ್ಮ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿದೆ.

* ತುರ್ಕಿಯ ಅಹ್ಮದಿ ಸಹೋದರರೊಬ್ಬರು ಹೇಳಿದರು. ನಾವೆಲ್ಲ ತುರ್ಕಿ ಅಹ್ಮದಿಯರು ನಿಮ್ಮೊಡನೆ ಪ್ರೀತಿ ಹೊಂದಿದವರಾಗಿದ್ದೇವೆ. ಹತ್ತು ಹದಿನೈದು ವರ್ಷಗಳ ಮುಂಚೆ ಕೇವಲ ಮೂರು ನಾಲ್ಕು ಕುರ್ತ್ ಅಹ್ಮದಿಯರು ಕಾಣಿಸುತ್ತಿದ್ದರು ಆದರೆ ಈಗ ಒಂದು ದೊಡ್ಡ ಸಮೂಹವೇ ಕಾಣಿಸುತ್ತಿದೆ. ತುರ್ಕಿಯಲ್ಲಿ ಅತಿಶೀಘ್ರವಾಗಿ ಅಹ್ಮದಯತ್ತಿನ ಪ್ರಗತಿಗಾಗಿ ಪ್ರಾರ್ಥಿಸಬೇಕಾಗಿ ವಿನಂತಿಸುತ್ತೇನೆ.

ಆಗ ಹುಝೂರ್ ಹೇಳಿದರು ಅಲ್ಲಾಹನು ಅನುಗ್ರಹಿಸಲಿ. ಈಗ ಈ ಕೆಲಸವಂತೂ ನಮಗೆ ಮಾಡಬೇಕಾಗಿದೆ.

* ಒಬ್ಬ ವಿದ್ಯಾರ್ಥಿಯು ತನ್ನ ಪರೀಕ್ಷೆಯಲ್ಲಿ ಉತ್ತೀರ್ಣನಾಗಲು ಪ್ರಾರ್ಥಿಸಲು ಕೇಳಿಕೊಂಡನು ಬಯಸಿದನು. ಆಗ ಹುಝೂರ್ ಹೇಳಿದರು. ಅಲ್ಲಾಹನು ನಿಮ್ಮನ್ನು ಉತ್ತೀರ್ಣಗೊಳಿಸಲಿ.

ಅದೇ ರೀತಿ ವ್ಯಕ್ತಿಯೋರ್ವನು ತನ್ನ ತಾಯಿಯ ಆರೋಗ್ಯಕ್ಕಾಗಿ ಪ್ರಾರ್ಥನೆ ಬಯಸಿದರೆ ಆಗ ಹುಝೂರ್ ಹೇಳಿದರು. ಅಲ್ಲಾಹನ ಅನುಗ್ರಹವಿರಲಿ.

* ಓರ್ವ ಸಾಹಿಬರು ಪ್ರಶ್ನೆ ಕೇಳಿದರು. ನಾವು ಜಲ್ಸದಲ್ಲಿ ಹುಝೂರರ ಕಾರ್ಯ ಮಗ್ನತೆ ಕಂಡಿದ್ದೆವು. ಹುಝೂರ್ ಅಷ್ಟೆಲ್ಲ ಕಾರ್ಯಕ್ರಮವನ್ನು ಹೇಗೆ ನಿಭಾಯಿಸುವಿರಿ.

ಆಗ ಹುಝೂರ್ ಹೇಳಿದರು. ಅಲ್ಲಾಹನು ಹೊಣೆಯನ್ನು ಹಾಕಿದ ಮೇಲೆ ಸಹಕಾರವನ್ನು ನೀಡುವವನಾಗಿದ್ದಾನೆ. ದುಆ ಮಾಡಿರಿ ಅಲ್ಲಾಹನು ತನ್ನ ಸಹಾಯಹಸ್ತ ಮುಂದುವರಿಸುತ್ತಿರಲಿ. ನಿಮಗೆ ಈ ಪ್ರಾರ್ಥನೆ ಮಾಡಬೇಕಾಗಿದೆ.

* ಓರ್ವ ನೌಮುಬಾಯೆ ಕೇಳಿದನು. ನಾನು ಅಲ್ಲಾಹನ ಅನುಗ್ರಹದಿಂದ 6 ತಿಂಗಳ ಹಿಂದೆ ಅಹ್ಮದಿ ಆಗಿರುತ್ತೇನೆ ಇದೀಗ ಹುಝೂರರನ್ನು ಕಂಡು ನಾನು ತುಂಬ ಭಾವುಕನಾಗಿದ್ದೇನೆ. ಲೋಕದಲ್ಲಿ ಎಷ್ಟೋ ಮಿಲಿಯನ್ ಅಹ್ಮದಿಯರು ಕನಸಿನಲ್ಲಿಯಾದರೂ ಕಾಣಲು ಕಾತರರಾಗಿರುತ್ತಾರೆ. ನಾವು ಎಷ್ಟು ಭಾಗ್ಯವಂತರಾಗಿದ್ದೇವೆ. ಹುಝೂರ್ ನಮ್ಮ ಮುಂದಿದ್ದಾರೆ. ಅವರು ಹೇಳಿದರು. ನನ್ನ ಮೂರು ಸಹೋದರ ಸಂಬಂಧಿಕರು ಅಹ್ಮದಿಯರಲ್ಲ. ಅವರು ನನ್ನ ಜೊತೆಯಲ್ಲಿ ಬಂದಿದ್ದಾರೆ. ಅವರು ಅಹ್ಮದಿಅತ್ ಸ್ವೀಕರಿಸುವಂತೆ ದುಆ ಮಾಡಿರಿ. ನಮ್ಮ ಎಲ್ಲ ಕುಟುಂಬ ಸದಸ್ಯರು ಅಹ್ಮದಿಯತ್ ಸ್ವೀಕರಿಸುವಂತಾಗಲಿ.

* ಮಿತ್ರರೊಬ್ಬರು ಪ್ರಶ್ನೆ ಮಾಡಿದರು. ನಮ್ಮ ಮತ್ತು ಅಹ್ಮದಿಯೇತರ ನಡುವೆ ಹಲವು ಬಾರಿ ಮಾತುಗಳು ಆಗಿವೆ. ಆದರೆ ನಮ್ಮ ವಿರೋಧಿಗಳು ಭಿನ್ನಾಭಿಪ್ರಾಯಗಳನ್ನು ತುಂಬ ಉತ್ತೇಜಿಸಿ ಪ್ರಸ್ತುತಪಡಿಸುತ್ತಾರೆ. ಈ ತೀವ್ರತೆಯನ್ನು ಹೇಗೆ ಕಡಿಮೆ ಮಾಡಬಹುದು?

ಆಗ ಹುಝೂರ್ ಹೇಳಿದರು. ಅವರಿಗೆ ಹೇಳಬೇಕು. ನಮ್ಮೊಡನೆಯಿರುವ ಸಾಮ್ಯತೆಯಲ್ಲಿ ಬಂದು ಒಗ್ಗೂಡಿರಿ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಅದೇ ತತ್ವ ಪ್ರತಿಪಾದಿಸಿದ್ದಾನೆ. **"ತಆಲು ಇಲಾ ಕಲಿಮತಿನ್ ಸವಾಯಿಂ ಬೈನನ ವ ಬೈನಕುಂ"** ನಮ್ಮ ನಿಮ್ಮೊಡನೆಯಿರುವ ಒಂದು ವಿಷಯದ ಮೇಲೆ ಒಗ್ಗೂಡಿರಿ.

ಹುಝೂರ್ ಹೇಳಿದರು ಗ್ರಂಥದವರ ಪೈಕಿ ಈ ತತ್ವ ನಡೆಯುವುದಾದರೆ ಮುಸ್ಲಿಮರಲ್ಲಿ ಏಕೆ ಸಾಧ್ಯವಿಲ್ಲ? ಮಾನವೀಯತೆಯು ತುಂಬ ಅವಶ್ಯವಿದೆ. ಮಾನವೀಯ ಮೌಲ್ಯಗಳನ್ನು ಸ್ಥಾಪಿಸುವ ಅಗತ್ಯವಿದೆ. ಎಲ್ಲರೂ ಅದರ ಮೇಲೆ ಒಗ್ಗೂಡಬೇಕಾಗಿದೆ. ಅಲ್ಲಾಹನ ಹೆಚ್ಚಿನ ಆದೇಶಗಳು ಮಾನವೀಯ ಮೌಲ್ಯಗಳ ಕುರಿತು ಆಗಿವೆ ಧರ್ಮಗಳ ವಿಷಯ ಅನಂತರದ ಮಾತಾಗಿದೆ. ವಿರೋಧ ಮಾಡುವವರಂತೂ ವಿರೋಧ ಮಾಡುತ್ತಲೇ ಹೋಗುವರು.

* ಒಂದು ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ಪಾಕಿಸ್ತಾನದಲ್ಲಿ ಮುಲ್ಲಾಗಳ ವಿರೋಧವಿದೆ. ಅವರು ಮಾತು ಕೇಳಲು ಬಯಸುವುದಿಲ್ಲ. ಆದರೆ ಆಫ್ರಿಕಾದಲ್ಲಿ ಮೌಲ್ವಿಗಳು ನಮ್ಮ ಮಾತುಗಳನ್ನು ಕೇಳುತ್ತಾರೆ ವಾಸ್ತವ ತಿಳಿದಾಗ ನಂಬುತ್ತಾರೆ. ತಮ್ಮ ಸಂಗಡಿಗರೊಂದಿಗೆ ಅಹ್ಮದಿಯತ್ ಸ್ವೀಕರಿಸುತ್ತಾರೆ. ಅಲ್ಲಾಹನು ಯಾರಿಗೆ ಮಾರ್ಗದರ್ಶನ ನೀಡಬಯಸುತ್ತಾನೋ ಅವರಿಗೆ ಮಾರ್ಗದರ್ಶನ ದಯಪಾಲಿಸುತ್ತಾನೆ. ಯಾರ ಮೇಲೆ ಮುದ್ರೆ ಹಾಕಲ್ಪಟ್ಟಿದೆಯೋ ಅವರಿಗೆ ಮಾರ್ಗದರ್ಶನ ಹೇಗೆ ಲಭಿಸಲು ಸಾಧ್ಯ?

* ಭೇಟಿಯ ನಂತರ ತುರ್ಕಿ ಬಾಂಧವರು ತಮ್ಮ ಅನಿಸಿಕೆಗಳನ್ನು ಸಹ ವ್ಯಕ್ತಪಡಿಸಿದರು ಮಿತ್ರರೊಬ್ಬರು ಹೀಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಹುಝೂರ್ ಆಗಮಿಸಿದಾಗ ಕೋಣೆಯೆಲ್ಲಾ ಪ್ರಕಾಶದಿಂದ ತುಂಬಿ ಹೋಗಿದ್ದನ್ನು ನಾನು ಕಂಡಿದ್ದೇನೆ. ಅದರಿಂದ ನಮ್ಮ ಮನಸ್ಸುಗಳಿಗೆ ನೆಮ್ಮದಿ ದೊರೆಯಿತು. ತಾವು ಹೃದಯಪೂರ್ವಕವಾಗಿ ನಮ್ಮನ್ನು ಸ್ವೀಕರಿದಿರಿ ಮತ್ತು ನಮ್ಮ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದಿರಿ. ನಮಗೆ ನಿಮ್ಮ ದುಆಗಳ ಭಾಗ್ಯ ದೊರೆಯಿತು. ತಾವು ನಮ್ಮೆಲ್ಲರಿಗೋಸ್ಕರ ಮತ್ತು ತುರ್ಕಿ ಜಮಾಅತಿನ ಪ್ರಗತಿಗೋಸ್ಕರ ದುಆ ಮಾಡಿದಿರಿ.

* ಮಿತ್ರರೊಬ್ಬರು Mr. Karim Mohmud ಸಾಹಿಬ್ ಹೇಳಿದರು. ನನಗೆ ಜೀವನದಲ್ಲಿ ಪ್ರಥಮ ಬಾರಿಗೆ ಹುಝೂರರನ್ನು ಇಷ್ಟು ಸಮೀಪದಿಂದ ಕಾಣುವ ಭಾಗ್ಯ ದೊರೆತಿದೆ. ಈ ಭೇಟಿಯ ಪ್ರತಿ ಕ್ಷಣ ನನ್ನ ಒಳಗಿನ ಭಾವನೆಗಳನ್ನು ಉತ್ತೇಜಿಸಿದೆ. ಹುಝೂರ್ ಪ್ರತಿ ವ್ಯಕ್ತಿಯ ಪ್ರಶ್ನೆಗೆ ಅವರ ಸ್ವಭಾವಕ್ಕನುಗುಣವಾಗಿ ಉತ್ತರ ನೀಡಿದ್ದು ಸ್ವಾರಸ್ಯಕರವಾಗಿತ್ತು.

* ಈ ತಂಡದಲ್ಲಿ 12 ವರ್ಷದ ಒಬ್ಬ ಅಮುಸ್ಲಿಮ ಬಾಲಕನೂ ಇದ್ದ. ಅವನು ತನ್ನ ಅಭಿಪ್ರಾಯವನ್ನು ಹೀಗೆ ತಿಳಿಸಿದನು. ನಾನು ಹುಝೂರರ ಪವಿತ್ರ ಮುಖವನ್ನು ನೋಡುತ್ತಲೇ ನನ್ನ ಹೃದಯದ ಬಡಿತವು ಸಂತೋಷದಿಂದ ಹೆಚ್ಚಾಗತೊಡಗಿತು. ಇಂದು ನಾವು ತುಂಬ ಸಂತೋಷವಾಗಿದ್ದೇನೆ.

* ಓರ್ವ ಅಹ್ಮದಿ ಮಿತ್ರರು Ogun sen ಸಾಹಿಬ್ ಹೇಳೀದರು. ಹುಝೂರರೊಂದಿಗೆ ಇದು ನನ್ನ ಮೊದಲ ಭೇಟಿಯಾಗಿತ್ತು. ಈ ಭೇಟಿಯ ವರ್ಣನೆ ನನ್ನಿಂದ ಸಾಧ್ಯವಿಲ್ಲ.

* ಓರ್ವ ಅಹ್ಮದಿಯೇತರ ಮಿತ್ರರಾದ Con utebey ಸಾಹಿಬ್ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಈ ಭೇಟಿಯನ್ನು ನಾನು ನಿರೀಕ್ಷಿಸಿರಲಿಲ್ಲ, ಇದರ ವರ್ಣನೆಯೂ ಅಸಾಧ್ಯವಾಗಿದೆ. ಅವರ ವ್ಯಕ್ತಿತ್ವದಲ್ಲಿ ಒಂದು ಆಯಸ್ಕಾಂತಿಯ ರೀತಿಯಲ್ಲಿ ಆಕರ್ಷಣೆಯಿದೆ.

* ಇನ್ನೋರ್ವ ಅಹ್ಮದಿಯೇತರ ಮಿತ್ರರಾದ ಅಬ್ದುಲ್ಲಾ ಸಾಹಿಬ್

ಹೇಳಿದರು. ಖಲೀಫರ ಭೇಟಿಯಿಂದ ನನಗೆ ನೆಮ್ಮದಿ ದೊರೆತಿದೆ. ನಾನು ಕಂಡಿದ್ದೇನೆ. ಈ ಪರಿಸರದಲ್ಲಿ ಆಧ್ಯಾತ್ಮಿಕತೆಯ ಅಲೆಗಳು ತೇಲಾಡುತ್ತಿದ್ದವು.

* Enteken ಸಾಹಿಬ್ ಹೇಳಿದರು. ಹುಝೂರರೊಂದಿಗೆ ಭೇಟಿಯ ಅನಿಸಿಕೆ ವ್ಯಕ್ತಪಡಿಸಲು ತನ್ನಲ್ಲಿ ಪದಗಳಿಲ್ಲ. ಖಲೀಫರ ಅಸ್ತಿತ್ವವು ಪ್ರೀತಿ ಮತ್ತು ನೆಮ್ಮದಿ ಕೊಡುವ ಅಸ್ತಿತ್ವವಾಗಿದೆ.

* ಗುಲ್‌ದಾಸ್ತಾನ್ ಸಾಹಿಬಾ ಹೇಳುತ್ತಾರೆ. ನಿಮ್ಮ ವ್ಯಕ್ತಿತ್ವವನ್ನು ನಿಮ್ಮ ಹೆಸರಿನಂತೆಯೇ ಕಂಡಿದ್ದೇನೆ. ನಿಮ್ಮ ಮುಖ ರೂಪವು ಮನುಷ್ಯನನ್ನು ಸಂತಸ ಮತ್ತು ಮುದ ನೀಡುವಂತಿದೆ.

* Sara Yontu ಸಾಹಿಬಾ ಹೇಳುತ್ತಾರೆ. ನಿಮ್ಮನ್ನು ನಾನು ಕರುಣಾಮಯಿಯಾಗಿ ಕಂಡಿದ್ದೇನೆ. ಹುಜೂರ್ ತುಂಬ ಪ್ರೀತಿಯಿಂದ ನನ್ನ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದ್ದಾರೆ. ಅಷ್ಟೊಂದು ಮಹೋನ್ನತ ಸ್ಥಾನದಲ್ಲಿದ್ದರೂ ಹುಝೂರ್ ನಮಗೆ ಹೆಚ್ಚು ಸಮಯ ಮತ್ತು ಗಮನವನ್ನು ಹರಿಸಿದ್ದಾರೆ.

* Esma ಸಾಹಿಬಾ ಹೇಳಿದರು. ನಾನು ಹುಝೂರರ ಮುಂದೆ ಯಾವುದೋ ಇನ್ನೊಂದು ಲೋಕದಲ್ಲಿದ್ದೇನೆ ಎಂಬಂತೆ ಭಾಸವಾಗುತ್ತಿತ್ತು. ಅವರ ವ್ಯಕ್ತಿತ್ವ ತುಂಬ ಪ್ರಭಾವಶಾಲಿಯಾಗಿದೆ.

* ಓರ್ವ ಮಹಿಳೆ Ayben ಸಾಹಿಬಾ ಹುಝೂರರೊಂದಿಗೆ ಆದ ಭೇಟಿಯ ಕುರಿತು ಹೇಳಿದರು. ಈ ಭೇಟಿಯು ತುಂಬ ಪ್ರೀತಿಯದ್ದಾಗಿತ್ತು. ಈ ಭೇಟಿಯಲ್ಲಿ ನನ್ನ ಸಹೋದರ Hassen odebas ಎದ್ದು ನಿಂತು ಹೇಳಿದನು. ಖಲೀಫರೇ! ನಾವೆಲ್ಲ ತುರ್ಕಿನ ಅಹ್ಮದಿಯರು ನಿಮಗೆ ತುಂಬ ಪ್ರೀತಿಸುತ್ತೇವೆ ಎನ್ನುವಾಗ ನಾನು ಸಂತೋಷಗೊಂಡೆ. ಏಕೆಂದರೆ ಅವರು ಎಲ್ಲ ತುರ್ಕ್ ಅಹ್ಮದಿಯರನ್ನು ಪ್ರತಿನಿಧಿಸುತ್ತಿದ್ದರು. ಅಲ್ಲದೇ ಅಷ್ಟೆಲ್ಲ ಸಂಖ್ಯೆಯಲ್ಲಿ ತುರ್ಕ್ ಅಹ್ಮದಿಯರನ್ನು ಏಕಸ್ಥಾನದಲ್ಲಿ ಕಂಡು ನನಗೆ ಹಾರ್ಧಿಕ ಸಂತೋಷವಾಯಿತು.

* ಈ ತಂಡದಲ್ಲಿ ಭಾಗವಹಿಸಿದ್ದ ಓರ್ವ ಮಹಿಳೆ Akcana ಸಾಹಿಬಾ ಹೇಳಿದರು. ಅಷ್ಟೊಂದು ಪರಿಪೂರ್ಣ ವ್ಯವಸ್ಥೆ ಕಂಡು ನಮ್ಮೊಳಗೆ ಒಂದು ಪ್ರಶ್ನೆ ಮತ್ತು ಸಂಶಯ ಮೂಡುತ್ತದೆ. ನಿಜವಾಗಿಯೂ ಇದು ಅಲ್ಲಾಹನ ಕಡೆಯದ್ದೇ ಏಕೆ ಆಗಿರಬಾರದು?

* ತುರ್ಕಿ ಬಾಂಧವರ ಹುಝೂರರೊಂದಿಗಿನ ಈ ಭೇಟಿ 8:30 ಗಂಟೆಯವರೆಗೆ ನಡೆಯಿತು. ಭೇಟಿಯ ಕೊನೆಯ ಭಾಗವಾಗಿ ಎಲ್ಲಾ ಕುಟುಂಬಗಳು ಹುಝೂರರ ಜೊತೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ತಂಡದ ಸದಸ್ಯರೆಲ್ಲರೂ ಭಾವುಕರಾಗಿ ಹುಝೂರರ ಹಸ್ತವನ್ನು ಚುಂಬಿಸುತ್ತಿದ್ದರು. ಹುಝೂರ್ ಪ್ರೀತಿಯಿಂದ ತಂಡದ ಸದಸ್ಯರಿಗೆ ಲೇಖನಿ ನೀಡಿದರು. ಮತ್ತು ಸಣ್ಣ ಬಾಲಕ ಬಾಲಕಿಯರಿಗೆ ಚಾಕ್ಲೇಟ್‌ಗಳನ್ನು ನೀಡಿದರು.

**ಸಲ್ವೇನಿಯಾ ತಂಡದ ಭೇಟಿ:**

ಅನಂತರ ಕಾರ್ಯಕ್ರಮದನ್ವಯ ಸಲ್ವೇನಿಯಾ ದೇಶದಿಂದ ಬಂದ ತಂಡವು ಹುಝೂರರೊಂದಿಗೆ ಭೇಟಿಯಾಗುವ ಭಾಗ್ಯ ಪಡೆದರು. ಸಲ್ವೇನಿಯಾ ದೇಶದಿಂದ ನಾಲ್ಕು ಜನರ ತಂಡವೊಂದು ಬಂದಿತ್ತು.

ಭೇಟಿಯ ಪ್ರಾರಂಭದಲ್ಲಿ ಹುಝೂರರು ಎಲ್ಲಾ ಸದಸ್ಯರ ಕುಶಲೋಪರಿ ವಿಚಾರಿಸಿದರು. ಮತ್ತು ಸರತಿಯಂತೆ ಅವರ ಪರಿಚಯ ಪಡೆದರು.

* ತಂಡದ ಸದಸ್ಯರೊಬ್ಬರು ಹೇಳಿದರು ನಾನು botanical garden ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಆಗ ಹುಝೂರ್ ಕೇಳಿದರು. ನಿಮ್ಮ Garden ನಲ್ಲಿ ಲೋಕದ ವಿವಿಧ ದೇಶಗಳ ಗಿಡಗಳು ಇವೆಯೇ, ಆಗ ಅವರು ಹೇಳಿದರು. ಹೌದು ಇವೆ.

* ಸಾರಿಗೆ ವಿಭಾಗಕ್ಕೆ ಸೇರಿದ ತಂಡದ ಇಬ್ಬರು ಮಹಿಳಾ ಸದಸ್ಯರು ಈ ಜಲ್ಸ ಸಾಲಾನದಲ್ಲಿ ಮೊದಲ ಬಾರಿ ಭಾಗವಹಿಸಿದ್ದರು. ಅವರು ಹೇಳಿದರು. ನಾವು ನಮ್ಮ ಜೀವನದಲ್ಲಿ ಮುಸ್ಲಿಮರ ಇಂತಹದೊಂದು ಕಾರ್ಯಕ್ರಮ ಮೊದಲ ಬಾರಿ ಕಂಡು ತುಂಬಾ ಪ್ರಭಾವಿತರಾಗಿದ್ದೇವೆ. ಎಲ್ಲವು ಸುವ್ಯವಸ್ಥಿತ ರೀತಿಯಲ್ಲಿತ್ತು. ಎಲ್ಲರೂ ಪರಸ್ಪರ ಪ್ರೀತಿಯ ವರ್ತನೆ ಮಾಡುತ್ತಿದ್ದರು. ವ್ಯವಸ್ಥೆಗಳು ತುಂಬಾ ಚೆನ್ನಾಗಿದ್ದವು. ಅವರು ಹೇಳಿದರು. ಹುಝೂರರ ಅನುಗ್ರಹಿತ ವ್ಯಕ್ತಿತ್ವದಿಂದ ನಾವು ತುಂಬ ಪ್ರಭಾವಿತರಾಗಿದ್ದೆವು, ಹುಝೂರರ ವ್ಯಕ್ತಿತ್ವ ತುಂಬ ಪ್ರಕಾಶಮಯ ವ್ಯಕ್ತಿತ್ವ ಆಗಿದೆ. ಹುಝೂರ್ ನಮ್ಮ ವೃತ್ತಿಯ ಬಗ್ಗೆಯೂ ಮಾತನಾಡಿಸಿದರು. ನಾವು ಇಸ್ಲಾಮಿನ ಕುರಿತು ಇಲ್ಲಿಂದ ಎಲ್ಲಾ ರೀತಿಯಲ್ಲಿ ತೃಪ್ತರಾಗಿ ಮರಳುತ್ತಿದ್ದೇವೆ.

ಭೇಟಿಯ ಕೊನೆಯಲ್ಲಿ ಸದಸ್ಯರೆಲ್ಲರೂ ಹುಝೂರರ ಜೊತೆಯಲ್ಲಿ ಭಾವಚಿತ್ರ ತೆಗೆಯಿಸಿಕೊಂಡರು.

**ಅರಬ್ ಬಾಂಧವರ ಭೇಟಿ**

ಅನಂತರ ಅರಬ್ ಬಾಂಧವರೊಂದಿಗೆ ಹುಝೂರರ ಭೇಟಿ ಪ್ರಾರಂಭವಾಯಿತು. ಅವರ ಸಂಖ್ಯೆ 500 ಸಮೀಪವಿತ್ತು. ಅದರಲ್ಲಿ 300ರ ಸಮೀಪ ಜರ್ಮನಿಯಲ್ಲಿ ಇರುವವರಾಗಿದ್ದರು. ಉಳಿದವರು ಫ್ರಾನ್ಸ್, ಬೆಲ್ಜಿಯಂ, ಸ್ಪೇನ್ ಮತ್ತು ಇತರ ದೇಶಗಳಿಂದ ಜಲ್ಸದಲ್ಲಿ ಭಾಗವಹಿಸಿದ್ದರು. ಭೇಟಿಯ ಪ್ರಾರಂಭದಲ್ಲಿ ಹುಝೂರ್ ಎಲ್ಲರ ಕುಶಲೋಪರಿ ವಿಚಾರಿಸಿದರು.

ಹುಝೂರ್ ಹೇಳಿದರು. "ಫ್ರಾನ್ಸ್‌ನಿಂದ ಬಂದವರು ಕೈಯೆತ್ತಿ" ಆಗ ದೊಡ್ಡ ಸಂಖ್ಯೆಯಲ್ಲಿ ಕೈಗಳನ್ನು ಎತ್ತಲ್ಪಟ್ಟವು. ಆಗ ಹುಝೂರ್ ಹೇಳಿದರು. ಜರ್ಮನಿ ಮತ್ತು ಬೆಲ್ಜಿಯಂನಲ್ಲಿ ಇರುವ ಅರಬ್ ಬಾಂಧವರು ತಮ್ಮ ಸಂಖ್ಯೆ ಹೆಚ್ಚಿಸಬೇಕಾಗಿದೆ. ಫ್ರಾನ್ಸ್‌ನವರು ಮುಂದುವರೆಯುತ್ತಿದ್ದಾರೆ.

ಹುಝೂರ್ ಅರಬ್ ಬಾಂಧವರನ್ನು ಸಂಬೋಧಿಸಿ ಹೇಳಿದರು. ಹಝ್ರತ್ ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿಯನ್ನು ನೀವು ಸತ್ಯವೆಂದು ಭಾವಿಸಿ ಮಸೀಹ್ ಮಹದಿಯನ್ನು ಸ್ವೀಕರಿಸುವವರಾಗಿದ್ದರೆ, ಅಹ್ಮದಿಯತ್ತನ್ನು ವಾಸ್ತವ ಇಸ್ಲಾಮ್ ಎಂದು ಸ್ವೀಕರಿಸುವವರಾದರೆ ಈ ಸಂದೇಶವನ್ನು ಮುಂದೆ ಕೊಂಡು ಹೋಗುವುದು ನಿಮ್ಮ ಕರ್ತವ್ಯವಾಗಿದೆ. ತಮ್ಮ ಸಹೋದರರಿಗೂ ತಿಳಿಸಿ. ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. "ತಮಗೆ ಬಯಸಿದ್ದನ್ನೇ ಇತರರಿಗೆ ಬಯಸಬೇಕು" ಆದುದರಿಂದ ನಿಮ್ಮ ಕರ್ತವ್ಯವಾಗಿದೆ. ಇತರರನ್ನೂ ಅಹ್ಮದಿಯನ್ನಾಗಿ ಮಾಡಬೇಕಾಗಿದೆ.

* ಅರಬ್ ಮಿತ್ರರೊಬ್ಬರು ಹೇಳಿದರು. ಇಲ್ಲಿ ಬಂದು ಇಸ್ಲಾಮಿನ ನಿಜವಾದ ಶಿಕ್ಷಣವನ್ನು ಕಂಡಿದ್ದೇನೆ. ಅದು ಹಿಂಸೆಯನ್ನು ಕೊನೆಗೊಳಿಸುತ್ತದೆ. ಅಹ್ಮದಿಯಾ ಜಮಾಅತ್ ಮಾತ್ರ ಇಸ್ಲಾಮಿನ ನಿಜವಾದ ಶಿಕ್ಷಣ ಪ್ರಸ್ತುತ ಪಡಿಸುತಿದೆ ಮತ್ತು ಅದರಂತೆ ನಡೆದು ಕೊಳ್ಳುತಿದೆ. ಇತ್ತೀಚೆಗೆ ಇರಾಕಿನಲ್ಲಿ ತುಂಬ ಹಿಂಸೆಯ ಚಟುವಟಿಕೆಗಳು ನಡೆಯುತ್ತಿವೆ. ಈ ಪರಿಸ್ಥಿತಿಗಳಿಂದ ನಾವು ಹೇಗೆ ಪಾರಾಗಬಹುದು?

ಆಗ ಹುಝೂರ್ ಹೇಳಿದರು. ಸಿರಿಯಾ ಮತ್ತು ಇತರ ದೇಶಗಳಲ್ಲೂ ಅದೇ ಪರಿಸ್ಥಿತಿಗಳಿವೆ. ಎಲ್ಲ ಕಡೆ ಹಿಂಸೆ ಕಾಣುತ್ತಿದ್ದೇವೆ. ಎಲ್ಲೂ ನಿಜವಾದ ಇಸ್ಲಾಮ್ ಕಂಡು ಬರುತ್ತಿಲ್ಲ. ಜನರ ಮುಂದೆ ಪ್ರಸ್ತುತ ಪಡಿಸುತ್ತಿರುವ ಇಸ್ಲಾಮ್ ಧರ್ಮಕ್ಕೆ ನಿಜವಾದ ಧರ್ಮದವರಿಂದ ಯಾವ ಸಂಬಂಧವೂ ಇಲ್ಲ. ನಾವು ಪ್ರಾರ್ಥಿಸುತ್ತೇವೆ. ಅಲ್ಲಾಹನು ಈ ಅಶಾಂತತೆ ದೂರ ಮಾಡಲಿ.

ಹುಝೂರ್ ಹೇಳಿದರು. ಈ ಅಶಾಂತತೆ ದೂರ ಮಾಡುವ ಪರಿಹಾರವು ಅಲ್ಲಾಹನು ನಮಗೆ ತೋರಿಸಿಕೊಟ್ಟಿದ್ದಾನೆ. 14 ನೂರು ವರ್ಷಗಳ ಹಿಂದೆ ಹಝ್ರತ್ ರಸೂಲುಲ್ಲಾಹ್(ಸ) ಭವಿಷ್ಯ ನುಡಿದಿದ್ದರು. ಅಂತಿಮ ಕಾಲದಲ್ಲಿ ಇಸ್ಲಾಮಿನ ಕೇವಲ ಹೆಸರು ಉಳಿಯುವುದು, ಎಲ್ಲವೂ ಕೆಟ್ಟು ಹೋಗುವುದು, ಆಗ ಅಲ್ಲಾಹನು ಜನರ ಮಾರ್ಗದರ್ಶನಕ್ಕಾಗಿ ಮಸೀಹ್ ಮಹದಿಯನ್ನು ಕಳುಹಿಸುವನು. ನೀವು ಅವರನ್ನು ಸ್ವೀಕರಿಸಬೇಕು. ಆದುದರಿಂದ ಈ ಮಸೀಹ್ ಮಹದಿಯನ್ನು ಸ್ವೀಕರಿಸುವಾಗ ಮಾತ್ರ ನಿಮ್ಮ ಅಶಾಂತಿ ದೂರವಾಗುವುದು. ಇಂದು ಅಹ್ಮದಿಯಾ ಜಮಾಅತ್ ಮಾತ್ರ ನಿಜವಾದ ಇಸ್ಲಾಮಿನ ರೂಪ ಪ್ರದರ್ಶಿಸುತ್ತಿದೆ. ಹಝುರತ್ ಅಕ್‌ದಸ್ ಮಸೀಹ್ ಮೌಊದ್(ಅ) ರನ್ನು ಕಾಲದ ಇಮಾಮರನ್ನು ನಂಬುವ ಫಲವಾಗಿಯೇ ಈ ನಿಜವಾದ ಶಿಕ್ಷಣ ಜಮಾಅತಿನಲ್ಲಿ ಪ್ರಚಲಿತವಿದೆ.

ಹುಝೂರ್ ಪ್ರಶ್ನೆ ಮಾಡುವವರನ್ನು ಸಂಬೋಧಿಸಿ ಹೇಳಿದರು. ಇನ್ನು ಇತರ ಸಜ್ಜನರಿದ್ದಾರೆ ಅವರು ಲೋಕದಲ್ಲಿ ಶಾಂತಿಯನ್ನು ಬಯಸುತ್ತಾರೆ. ನೀವು ಇತರ ಸಜ್ಜನರಿಗಾಗಿ ಲೋಕದಲ್ಲಿ ಶಾಂತಿ ಸ್ಥಾಪನೆ ಮಾಡಲು ಪ್ರಯತ್ನಿಸಬೇಕಾಗಿದೆ.

* ಓರ್ವ ಅರಬ್ ಮಿತ್ರರು ಅವರ ಸಂಬಂಧ ಮಧ್ಯ ಪ್ರಾಚ್ಯದಿಂದಿದೆ. ಅವರು ಹೇಳಿದರು. ಇರಾಕಿನಲ್ಲಿ ಈ ಹಿಂಸೆ ಹಾಗೂ ಉಗ್ರವಾದದ ಅಂತ್ಯಕ್ಕಾಗಿ ಏನು ಮಾಡಬಹುದಾಗಿದೆ. ಅಲ್ಲಿ ಮುಬಲ್ಲಿಗರನ್ನು ಕಳುಹಿಸಬಹುದೇ ಅಥವಾ ಬೇರೆ ವಿಧಾನ ಅನುಸರಿಸಬೇಕೆ?

ಆಗ ಹುಝೂರ್ ಹೇಳಿದರು ಕೇವಲ ಇರಾಕ್ ಮಾತ್ರವಲ್ಲ, ಲೀಬಿಯಾವೂ ಇದೆ. ಅಲ್ಲಿ ವಿಭಿನ್ನ ಗೋತ್ರಗಳಲ್ಲಿ ಹಿಂಸೆಯಿದೆ. ಸಿರಿಯಾದಲ್ಲೂ ಇದೆ. ಇಲ್ಲಿಯೂ ವಿವಿಧ ಗುಂಪುಗಳು ಹಿಂಸೆಯಲ್ಲಿ ತೊಡಗಿವೆ.
ಸರಕಾರಗಳು ಒಟ್ಟುಗೂಡಬೇಕು. ಮುಸ್ಲಿಮ್ ರಾಷ್ಟ್ರಗಳ ಒಕ್ಕೂಟ (OIC) ಇತರ ದೇಶಗಳ ಮತ್ತು ಬೃಹತ್ ಶಕ್ತಿಯುಳ್ಳ ರಾಷ್ಟ್ರಗಳ ಕಡೆ ನೋಡುವ ಬದಲು ತಮ್ಮ ದೇಶಗಳ ಮುಖ್ಯಸ್ಥರನ್ನು ಏಕೆ ಒಟ್ಟುಗೂಡುತ್ತಿಲ್ಲ? ತಮ್ಮ ಮುಖಂಡರನ್ನು ಏಕತ್ರಗೊಳಿಸಬೇಕು, ಸಂಘಟಿಸಬೇಕು, ಮಾನವೀಯ ಮೌಲ್ಯಗಳನ್ನು ಸ್ಥಾಪಿಸಬೇಕು. ನಮ್ಮೆಲ್ಲರಿಗೂ ಒಬ್ಬನೇ ಅಲ್ಲಾಹ್, ಒಬ್ಬನೇ ಪ್ರವಾದಿ, ಒಂದೇ ಗ್ರಂಥವಿರುವಾಗ ನಾವು ನಮ್ಮೆಲ್ಲ ಭಿನ್ನತೆಗಳನ್ನು ಮರೆತು ಮಾನವೀಯ ಮೌಲ್ಯಗಳನ್ನು ತಮ್ಮದಾಗಿಸಿಕೊಳ್ಳಬೇಕು ಮತ್ತು ಒಗ್ಗೂಡಬೇಕು.

ಹುಝೂರ್ ಹೇಳಿದರು. ಇದು ಒಬ್ಬ ಮನುಷ್ಯನ ಕಾರ್ಯವಲ್ಲ. ಖುತುಬಾ ಜುಮಅಗಳಲ್ಲಿ ನಾನು ಗಮನ ಸೆಳೆಯುತ್ತಿರುತ್ತೇನೆ. ಅರಬ್ ರಾಷ್ಟ್ರಗಳಿಗೋಸ್ಕರ ಜಮಾಅತಿನಲ್ಲಿ ಪ್ರಾರ್ಥಿಸಲು ಹೇಳುತ್ತೇನೆ ಮತ್ತು ಮುಸ್ಲಿಂ ಮುಖಂಡರಿಗೂ ಸಲಹೆ ನೀಡುತ್ತೇನೆ. ಐಕ್ಯ ಹೊಂದಬೇಕು. ಪರಸ್ಪರ ಭೇಟಿಯಾಗಿ ಮಾತನಾಡಬೇಕು. ಏಕೆ ಇತರರ ಹಿಂದೆ ಹೋಗಿ ತಮ್ಮನ್ನು ತಾವೇ ನಾಶಪಡಿಸುತ್ತಿದ್ದೀರಿ? ಇದನ್ನು ಅವರಿಗೆ ತಿಳಿಸಬೇಕು. ನಮ್ಮ ನಡುವೆ ಸಾಮ್ಯತೆ ಇರುವ ವಿಷಯಗಳಲ್ಲಿ ಏಕತ್ರಗೊಳ್ಳಬೇಕು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ

ಅದೇ ತಾನೇ ಬೋಧಿಸಿದ್ದು, **ತಆಲೌ ಇಲಾ ಕಲಿಮಿತಿನ್ ಸವಾಇ ಬೈನನ ವ ಬೈನಕುಂ** ಒಂದು ವಚನದೆಡೆ ಬನ್ನಿರಿ. ಅದು ನಮ್ಮ ನಿಮ್ಮ ನಡುವೆ ಸಮಾನವಾಗಿದೆ.

ಹುಝೂರ್ ಹೇಳಿದರು. ಗ್ರಂಥದವರೊಳಗೆ ಈ ತತ್ವ ನಡೆಯುವುದಾದರೆ ಮುಸ್ಲಿಮರಲ್ಲಿ ಏಕೆ ನಡೆಯುವುದಿಲ್ಲ? ಇಂದು ಮಾನವೀಯತೆಯ ಅವಶ್ಯಕತೆಯಿದೆ. ಮಾನವೀಯ ಮೌಲ್ಯಗಳನ್ನು ಸ್ಥಾಪಿಸುವ ಅಗತ್ಯವಿದೆ. ಎಲ್ಲರೂ ಆ ನೆಲೆಯಲ್ಲಿ ಒಗ್ಗೂಡಬೇಕಾಗಿದೆ.

ಹುಝೂರ್ ಹೇಳಿದರು. ಬೃಹತ್ ರಾಷ್ಟ್ರಗಳು ಮುಸ್ಲಿಮ್ ರಾಷ್ಟ್ರಗಳನ್ನು ನಾಶಗೊಳಿಸುವ ಹುನ್ನಾರ ನಡೆಸಿವೆ. ಹೀಗಿರುವಾಗ ಏಕೆ ಭಿನ್ನಭಿನ್ನವಾಗುತ್ತಿದ್ದೀರಿ. ಐಕ್ಯತೆ ಏಕೆ ಸಾಧಿಸುತ್ತಿಲ್ಲ?

ಹುಝೂರ್ ಹೇಳಿದರು. ಒಂದು ಸೋಜಿಗದ ವಿಷಯವಾಗಿದೆ. ಅದು ಯಾರೋ ಕೆಲ ದಿನಗಳ ಹಿಂದೆ ನನಗೆ ಕಳುಹಿಸಿದ್ದರು. ಹೊಳೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ಹೊರಟ ಒಬ್ಬನನ್ನು ತಡೆಯುತ್ತಾ ಇನ್ನೊಬ್ಬ ಕೇಳುತ್ತಾನೆ. ನೀವು ಮುಸ್ಲಿಮರೇ? ಯಾವ ಪಂಗಡದವರಾಗಿದ್ದೀರಿ? ಯಾವ ಮನತನದವರಾಗಿದ್ದೀರಿ? ಅವನು ಹೇಳುತ್ತಾನೆ. ನಾನು ಮುಸಲ್ಮಾನನೇ, ನನ್ನದು ಅದೇ ಪಂಗಡ, ನನ್ನದು ಅದೇ ಮನತನ. ಆತ್ಮಹತ್ಯೆ ಮಾಡಿಕೊಳ್ಳುವ ಮುಸಲ್ಮಾನನು ನಾನು ಆ ಒಬ್ಬ ಮೌಲ್ವಿಯ ಹಿಂದೆ ನಮಾಝ್ ಮಾಡುವವನಾಗಿದ್ದೇನೆ ಎಂದಾಗ ತಡೆಯುತ್ತಿದ್ದ ಆ ಮುಸಲ್ಮಾನ ಹೇಳುತ್ತಾನೆ. ಹಾಗಾದರೆ ನೀವು ಕಾಫಿರ್, ನೀವು ಕಾಫಿರ್ ಆಗಿ ಬದುವುದಕ್ಕಿಂತ ಸಾಯುವುದೇ ಲೇಸು ಎಂದು ಅವನನ್ನು ಹೊಳೆಗೆ ತಾನೆ ದೂಡುತ್ತಾನೆ.

ಹುಝೂರ್ ಹೇಳಿದರು. ಇಂತಹ ಮನಸ್ಥಿತಿಯಿದ್ದರೆ ಏನು ಮಾಡಲು ಸಾಧ್ಯ? ಆದುದರಿಂದ ತಮ್ಮ ಭಿನ್ನಾಭಿಪ್ರಾಯಗಳನ್ನು ದೂರ ಮಾಡಿಕೊಳ್ಳಿ. ಆಗ ಮಾತ್ರ ನೀವು ಉಳಿಯಬಹುದು.

ಒಬ್ಬ ಅರಬ್ ಶಿಯಾ ಬಗ್ಗೆ ಕೇಳಿದನು. ಜಮಾಅತ್ ಅವರನ್ನು ಏನು ಭಾವಿಸುತ್ತಿದೆ? ಶಿಯಾ ಅವರು ಖಲಿಫರನ್ನು ಅವಹೇಳನ ಮಾಡುತ್ತಾರೆ. ಹಝ್ರತ್ ಆಯಿಶಾ(ರ) ರವರನ್ನು ದೂಷಿಸುತ್ತಾರೆ. ಇತರ ಕೆಲ ಸಹಾಬರನ್ನು ನಿಂದಿಸುತ್ತಾರೆ. ಅವರ ಬಗ್ಗೆ ಜಮಾಅತಿನ ಅಭಿಪ್ರಾಯವೇನು. ಜಮಾಅತ್ ಅವರನ್ನು ಕಾಫಿರ್ ಎಂದು ಭಾವಿಸುತ್ತದೆಯೇ?

ಆ ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ಯಾವ ಜನರು ಸಹಾಬರನ್ನು ಕಾಫಿರ್ ಎನ್ನುತ್ತಾರೆ. ಬದರಿನ ಸಹಾಬರನ್ನು ಮತ್ತು ಇತರ ಹಿರಿಯ ಸಹಾಬರನ್ನು ಕಾಫಿರ್ ಎನ್ನುತ್ತಾರೆ. ಅವರ ಮೇಲೆ ಹಝ್ರತ್ ರಸೂಲುಲ್ಲಾಹ್(ಸ) ರವರ ಫತ್ವಾ ನಡೆಯುತ್ತದೆ. ನಮ್ಮ ಫತ್ವಾವೇನೂ ಅಲ್ಲ. ರಸೂಲುಲ್ಲಾಹ್(ಸ) ರವರು ಹೇಳಿದರು. **"ಮನ್ ಕಫರ ಮುಸ್ಲಿಮನ್ ಆದ ಇಲೈಹಿ ಕುಫ್‌ರುಹು"** ಯಾರು ಒಬ್ಬ ಮುಸ್ಲಿಮನನ್ನು ಕಾಫಿರ್ ಎನ್ನುತ್ತಾನೋ ಅವನ ಕುಫ್ರ್ ಅವನಿಗೆ ಮರಳುತ್ತದೆ. ಆದುದರಿಂದ ನಬಿ ಕರೀಂ(ಸ) ರವರ ಪತ್ವ ನಡೆಯುವುದು. ಇನ್ನೂ ಬೇರೆ ಫತ್ವಾದ ಅವಶ್ಯಕತೆಯಿಲ್ಲ. ನಾವಂತೂ ನಬಿ ಕರೀಂ(ಸ) ರವರ ಫತ್ವಾದ ಅನುಯಾಯಿಯಾಗಿದ್ದೇವೆ.

ಅದೇ ಮಿತ್ರರು ಮತ್ತೊಮ್ಮೆ ಕೇಳಿದರು. ಹಝ್ರತ್ ರಸುಲುಲ್ಲಾಹ್(ಸ) **"ಅಸ್‌ಹಾಬಿ ಕನ್ನುಜೂಮಿ ಫಬಿಅಯ್ಯಿಹಿಮ್ ಇಖ್‌ತದೈತುಹುಮ್ ಇಹ್‌ತದೈತುಮ್"** ಅಂದರೆ ನನ್ನ ಸಹಾಬರು ನಕ್ಷತ್ರಗಳಿದ್ದಂತೆ. ನೀವು ಅವರಲ್ಲಿ ಯಾರನ್ನಾದರೂ ಅನುಸರಿಸಿದರೆ ಮಾರ್ಗದರ್ಶನ ಪಡೆಯುವಿರಿ. ಅಂತೂ ಸಹಾಬರಿಗೆ ಬೈಯುವವನು ಸಹ ಕಾಫಿರ್ ಅಲ್ಲವೇ?

ಆಗ ಹುಝೂರ್ ಹೇಳಿದರು ಯಾರನ್ನು ನಬಿ ಕರೀಂ(ಸ) ಕಾಫಿರ್ ಎಂದರೋ ಅವರನ್ನು ಕಾಫಿರ್ ಅಲ್ಲ ಎನ್ನಲು ನಾನು ಯಾರು.

ಅವರು ಗಲಭೆ ಪಿತೂರಿ ನಡೆಸುವ ಜನರಾಗಿದ್ದರು. ಅವರು ಹಝ್ರತ್ ಉಸ್ಮಾನ್(ರ) ರವರನ್ನು ಶಹೀದರನ್ನಾಗಿ ಮಾಡಿದರು. ಇವೆಲ್ಲ ಪಿತೂರಿದಾರರು ತಮ್ಮ ದುಷ್ಪರಿಣಾಮಕ್ಕೆ ಗುರಿಯಾಗಿದ್ದಾರೆ. ಇವರ ಕುರಿತು ನಬಿಕರೀಂ(ಸ) ರವರು ಏನು ಫತ್ವಾ ನೀಡಿದ್ದಾರೋ ಅದೇ ತನ್ನ ಫತ್ವಾ ಆಗಿದೆ. ನಾನು ನಬಿ ಕರೀಂ(ಸ) ರವರ ಮೇಲೆ ವಿಶ್ವಾಸ ಹೊಂದಿದ್ದೇನೆ. ಅವರ ಫತ್ವಾದ ಮೇಲೆಯೇ ಖಾಯಂ ಆಗಿದ್ದೇನೆ.

* ಮಿತ್ರರೊಬ್ಬರು ಹೇಳಿದರು ಸಿರಿಯಾದಲ್ಲಿ ಪರಿಸ್ಥಿತಿ ತೀರ ಹದಗೆಟ್ಟಿದೆ. ಅದಕ್ಕಾಗಿ ಪ್ರಾರ್ಥಿಸಿರಿ ಆಗ ಹುಝೂರ್ ಹೇಳಿದರು. ಎಲ್ಲ ದೇಶಗಳು ತಮ್ಮ ತಮ್ಮ ಸಮಸ್ಯೆಗಳನ್ನು ಹೊಂದಿವೆ. ವಾಸ್ತವದಲ್ಲಿ ಮುಸ್ಲಿಮರ ಗೊಂದಲಗಳ ಬಗ್ಗೆ ವಿಚಾರ ಮಾಡುವ ಅಗತ್ಯವಿದೆ ಇತರ ಶಕ್ತಿಗಳಿಗೆ ಬಲಿಯಾಗುವ ಬದಲು ನಾವು ಐಕ್ಯ ಹೊಂದಬೇಕಾಗಿದೆ. ಪರಸ್ಪರ ಒಗ್ಗೂಡಬೇಕಾಗಿದೆ. ನಾವು ಆ ಬೃಹತ್ ರಾಷ್ಟ್ರಗಳಿಂದ ಆಯುಧಗಳನ್ನು ಖರೀದಿಸುತ್ತೇವೆ. ಒಂದೆಡೆ ನಾವು ಅವರ ಆರ್ಥಿಕತೆಯನ್ನು ಬಲಪಡಿಸುತ್ತಿದ್ದೇವೆ. ಇನ್ನೊಂದೆಡೆ ಅದೇ ಆಯುಧಗಳಿಂದ ತಮ್ಮ ಜನರನ್ನೇ ಕೊಲ್ಲುತ್ತಿದ್ದೇವೆ. ಒಂದೆಡೆ ಆ ಬೃಹತ್ ರಾಷ್ಟ್ರಗಳ ಕಾರ್ಖಾನೆಗಳು ನಮ್ಮ ಸಂಪತ್ತಿನಿಂದ ನಡೆಯುತ್ತಿವೆ. ಇನ್ನೊಂದೆಡೆ ಆ ಶಕ್ತಿಗಳು ನಮ್ಮನ್ನು ಒಬ್ಬರನ್ನು ಇನ್ನೊಬ್ಬರ ಕೈಯಿಂದ ಸಾಯಿಸುತ್ತಿದ್ದಾರೆ.

* ಅರಬ್ ಮಿತ್ರರೊಬ್ಬರು ಹೇಳಿದರು. ನಮ್ಮ ಅತ್ಯಂತ ಕಠಿಣ ಸಮಸ್ಯೆ ಎಂದರೆ ಹಿಂಸೆ ಮತ್ತು ಉಗ್ರವಾದವಾಗಿದೆ. ಜನರು ಇಸ್ಲಾಮ್ ಧರ್ಮದ ಬಗ್ಗೆ ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಅವರಿಗೆ ಈ ಹಿಂಸಾತ್ಮಕ ಇಸ್ಲಾಮಿನ ಬದಲು ಬೇರೆ ರೂಪ ಕಾಣುತ್ತಿಲ್ಲ. ನಮಗೆ ಅಹ್ಮದಿಯಾ ಜಮಾಅತಿನ ರೂಪದಲ್ಲಿ ಶಾಂತಿಪೂರ್ಣ ಬದಲು ದೊರೆತಿದೆ. ಈ ವಾಸ್ತವವಾದ ಇಸ್ಲಾಮ್ ಅತಿ ಶೀಘ್ರವಾಗಿ ಇತರ ಎಲ್ಲ ರಾಷ್ಟ್ರಗಳಲ್ಲಿ ತಲುಪಬೇಕಾಗಿದೆ ಆಗ ಜನರಿಗೆ ಇಸ್ಲಾಮಿನ ವಾಸ್ತವ ಶಿಕ್ಷಣ ತಿಳಿಸುವಂತಾಗುತ್ತದೆ. ಮತ್ತು ಲೋಕದಲ್ಲಿ ಹಿಂಸಾತ್ಮಕ ಇಸ್ಲಾಮ್ ಅಲ್ಲದೆ ವಾಸ್ತವಿಕ ಇಸ್ಲಾಮಿನ ಹಕ್ಕುದಾರ ಜಮಾಅತಿ ಉಪಸ್ಥಿತಿ ಇದೆ ಎಂದು ತಿಳಿಯುತ್ತದೆ.

ಆಗ ಹುಝೂರ್ ಹೇಳಿದರು. ಇಂದು ನಾವು ಜರ್ಮನ್ ಅತಿಥಿಗಳನ್ನು ಭೇಟಿಯಾಗಿದ್ದೇವೆ. ಇಸ್ಲಾಮಿನ ವಾಸ್ತವ ಶಿಕ್ಷಣವನ್ನು ಅವರಿಗೆ ಪ್ರಸ್ತುತಪಡಿಸಿದ್ದೇವೆ. ನಾವು ಪ್ರಯತ್ನ ಮಾಡುತ್ತಿದ್ದೇವೆ. ಇಸ್ಲಾಮಿನ ನಿಜವಾದ ಸಂದೇಶ ಲೋಕದಲ್ಲಿ ತಲುಪಿಸಬೇಕೆಂದು. ನಾವು ಈ ಪ್ರಯತ್ನವನ್ನು ಮುಂದುವರೆಸುವೆವು. ನೀವು ಜಲ್ಸದಲ್ಲಿಯೂ ಜಮಾಅತಿನ ವಾಸ್ತವ ರೂಪ ಕಂಡಿರಬಹುದು. ನಿಮಗೆ ಜಮಾಅತಿನಲ್ಲಿ ಕಂಡು ಬರುತ್ತಿರುವ ವಾಸ್ತವಿಕ ಆತ್ಮ, ಶಿಸ್ತು ಮತ್ತು ಅಚ್ಚುಕಟ್ಟು ಹಾಗೂ ಐಕ್ಯತೆ, ಇಸ್ಲಾಮಿನ ನಿಜವಾದ ಶಿಕ್ಷಣದ ಮೇಲೆ ಅಹ್ಮದಿಯಾ ಜಮಾಅತ್ ನಡೆಯುವ ಪ್ರಯತ್ನ ಮಾಡುತ್ತಿದೆ ಎಂದು ತಮಗೆ ಅನಿಸಬಹುದು. ಭೇಟಿಯ ನಂತರ ಹಲವು ಅರೆಬಿಯರು ತಮ್ಮ ಅನಿಸಿಕೆಗಳನ್ನು ಸಹ ವ್ಯಕ್ತಪಡಿಸಿದರು.

* ಮರಾಕಶಿನ ಅಹ್ಮದಿ ಮಹಿಳೆಯಾದ ಸಆದ್ ಬಿನ್ತ್ ಝುರೂಖ್ ಸಾಹಿಬಾ, ಜಲ್ಸ ಸಾಲಾನದಲ್ಲಿ ಭಾಗವಹಿಸಲು ತಮ್ಮ ಅಹ್ಮದಿಯೇತರ ಸಹೋದರಿ, ಸಹೋದರಿಯ ಪತಿ ಮತ್ತು ಮಕ್ಕಳೊಂದಿಗೆ ಬಂದಿದ್ದರು ಅವರು ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ಹುಝೂರರನ್ನು ಪರದೆಯ ಮೇಲಷ್ಟೇ ಕಾಣುತ್ತಿದ್ದೆ. ಆದರೆ ಎದುರಿಗೆ ನೋಡಿದಾಗ ಹುಝೂರರ ಮುಖ ಪ್ರಕಾಶದಿಂದ ಪ್ರಜ್ವಲಿಸುವಂತೆ ಕಾಣುತ್ತಿತ್ತು. ಮತ್ತು ನನ್ನಿಂದ ಉದ್ಗಾರ ಹೊರಟಿತು ಓ ದೇವರೇ ಅವರು ಮನುಷ್ಯರಲ್ಲ ದೇವದೂತರಾಗಿದ್ದಾರೆ! ನಮಗೆ ಜಲ್ಸದಲ್ಲಿ ತುಂಬ ಸಂತೋಷ ದೊರೆಯಿತು. ಜಲ್ಸದಲಿ ಭಾಗವಹಿಸಿದವರು ಅತ್ಯಂತ ಉನ್ನತಮಟ್ಟದ ನೀತಿಯ ಪ್ರದರ್ಶನ ಮಾಡಿದರು. ನಾನು ತಮ್ಮ ಅಹ್ಮದಿಯೇತರ ಸಹೋದರಿ ಮತ್ತು ಭಾವರನ್ನು ಜೊತೆಯಲ್ಲಿ ಕರೆದುಕೊಂಡು ಬಂದಿದ್ದೆ. ಹುಝೂರರ ಭಾಷಣ ಅವರ ಮೇಲೆ ತುಂಬ ಪ್ರಭಾವ ಬೀರಿತು. ಅಲ್ಲಾಹನ ಅನುಗ್ರಹದಿಂದ ಇಬ್ಬರು ಜಲ್ಸದಲ್ಲಿ ಬೈಅತ್ ಮಾಡಿದರು.

* ವೆಲನ್ಸಿಯಾ ಸ್ಪೇನಿನ ಓರ್ವ ಅಹ್ಮದಿಯೇತರ ಇಮಾಮ್ ಹಾಗೂ ಅರೇಬರಾಗಿರುವ ಮುಕರ್ರಮ್ ಅಹ್ಮದ್ ಬಿನ್ ಅಬ್ದುಲ್ ಖಾರ್ ಬಿನ್ ಮುಹಮ್ಮದ್ ಸಾಹಿಬ್ ಸಹ ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಹೇಳುತ್ತಾರೆ. ನನಗೆ ಈ ಜಲ್ಸದಲ್ಲಿ ಭಾಗವಹಿಸುವ ಅವಕಾಶ ದೊರೆತಿದೆ. ಇಲ್ಲಿ ನಾನು ಉನ್ನತಮಟ್ಟದ ವ್ಯವಸ್ಥೆ, ಸುಂದರತೆ, ಬರಮಾಡಿಕೊಳ್ಳುವಿಕೆ ಹಾಗೂ ಅತಿಥಿ ಸತ್ಕಾರ ಕಂಡಿದ್ದೇನೆ. ಅದನ್ನು ನಾನು ಊಹಿಸಿಯೂ ಇರಲಿಲ್ಲ. ನಾನು ಎಲ್ಲ ಆಯೋಜಕರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನನಗೆ ಹಝ್ರತ್ ಖಲೀಫತುಲ್ ಮಸೀಹ್‌ರೊಂದಿಗೆ ಹಸ್ತಲಾಘವ ಮಾಡುವ ಭಾಗ್ಯವು ದೊರೆಯಿತು. ಅಂತೆಯೇ ಇತರ ಬಾಂಧವರೊಂದಿಗೆಯೂ ಭೇಟಿಯಾಗುವ ಅವಕಾಶ ಸಿಕ್ಕಿತು. ಎಲ್ಲ ಕಡೆಯಿಂದಲೂ ನಗುಮುಖದಿಂದ ಮತ್ತು ಆಲಂಗಿಸುವ ಮೂಲಕ ಸ್ವಾಗತ ದೊರೆಯಿತು.

* ಅರೀಬಾ ಇಬ್ರಾಹಿಂ ಸಾಹಿಬ್ ತಮ್ಮ ಅನಿಸಿಕೆಗಳನ್ನು ತಿಳಿಸುತ್ತ ಹೇಳಿದರು. ಜಲ್ಸದಲ್ಲಿ ಭಾಗವಹಿಸಲು ಆಹ್ವಾನಿಸಿದಕ್ಕೆ ಕೃತಜ್ಞತೆ ಸಲ್ಲಿಸುತ್ತಿದ್ದೇನೆ. ಇಲ್ಲಿ ಅಭೂತಪೂರ್ವ ಸ್ವಾಗತ ಮತ್ತು ಅಸಾಮಾನ್ಯ ವ್ಯವಸ್ಥೆಗಳನ್ನು ಕಂಡು ತುಂಬ ಆಶ್ಚರ್ಯವಾಯಿತು. ನಾನು ಅಹ್ಮದಿಯರಲ್ಲಿ ನಬಿ ಕರೀಂ(ಸ) ತಂದಂತಹ ಇಸ್ಲಾಮಿನ ನಿಜ ರೂಪವನ್ನು ಕಂಡಿರುತ್ತೇನೆ.

* ಅವರು ಹೇಳಿದರು. ಜಲ್ಸಕ್ಕಿಂತ ಮೊದಲು ಹುಝೂರರನ್ನು ನೋಡುವ ಹಂಬಲವಿತ್ತು. ಆದರೆ ಅದು ಅದಕ್ಕಿಂತ ಮಿಗಿಲಾದ ರೂಪದಲ್ಲಿ ಪೂರ್ಣಗೊಂಡಿದೆ. ಏಕೆಂದರೆ ನನಗೆ ಹಸ್ತಲಾಘವ ಮಾಡುವ ಭಾಗ್ಯವು ದೊರೆತಿದೆ ಮತ್ತು ಖಲೀಫರು ನನಗೆ ಸಂಬೋಧಿಸಿ ಹೇಳಿದರು. ಅದು ನನಗೆ ತುಂಬ ಗೌರವದ ವಿಷಯವಾಗಿದೆ.

* ಫೆನ್ಸ್ ವಾನ್ಸೋ ಸಾಹಿಬ್ ಸಹ ಸ್ಪೇನ್‌ನಿಂದ ಬಂದ ತಂಡದಲ್ಲಿ ಶಾಮೀಲಾಗಿದ್ದರು. ಅವರು ಗಾಂಬಿಯಾಕ್ಕೆ ಸಂಬಂಧಿಸಿದವರಾಗಿದ್ದಾರೆ. ಅವರು ಹೇಳುತ್ತಾರೆ.

ನಾನು ತುಂಬ ಸಂತುಷ್ಟನಾಗಿದ್ದೇನೆ. ನಾನು ಇಲ್ಲಿ ಅಸಂಖ್ಯಾತ ಪ್ರೀತಿ ಮಾಡುವವರನ್ನು ಹಾಗೂ ಅತಿಥಿ ಸತ್ಕಾರ ಮಾಡುವವರನ್ನು ಕಂಡಿದ್ದೇನೆ. ನಾನು ಈ ಗೌರವಕ್ಕಾಗಿ ಅಹ್ಮದಿಯಾ ಜಮಾಅತ್ ಜರ್ಮನಿಗೆ ತುಂಬ ಆಭಾರಿಯಾಗಿದ್ದೇನೆ.

* ನಾಬ್ತಿ ಯಾಸೀನ್ ಸಾಹಿಬ್ ಅಲ್‌ಜಝೂಯಿರ್‌ನ ಅಹ್ಮದಿಯಾಗಿರುವವರು, ಅವರು ಮೂರು ವರ್ಷಗಳ ಹಿಂದೆ ಬೈಅತ್ ಮಾಡಿದ್ದರು. ಅವರು ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಪ್ರತಿಸಲವು ಜಲ್ಸದಲ್ಲಿ ಭಾಗವಹಿಸುವಿಕೆಯೂ ನನ್ನ ವಿಶ್ವಾಸದಲ್ಲಿ ಅಸಮಾನ್ಯ ವೃದ್ಧಿಗೆ ಕಾರಣವಾಗುತ್ತಿದೆ. ಮತ್ತು ಪ್ರತಿಸಲವು ಅಲ್ಲಾಹನ ಅಸಂಖ್ಯಾತ ಪುಷ್ಟಿಯ ದೃಷ್ಟಾಂತಗಳನ್ನು ಕಾಣಸಿಗುತ್ತದೆ. ಜಲ್ಸದಲ್ಲಿ ಇರುವುದು ನನಗೆ ಸ್ವರ್ಗದ ಅನುಭವವಾಗುತ್ತಿದೆ. ಇಲ್ಲಿ ವಿವಿಧ ಭಾಷೆ, ಸ್ವಭಾವಗಳ ಹಾಗೂ ಸಮುದಾಯಗಳ ಭಿನ್ನತೆ ನಡುವೆಯೂ ಎಲ್ಲ ಕಡೆಯಿಂದ ಅಸ್ಸಲಾಮು ಅಲೈಕುಂ ಧ್ವನಿಯು, ಸ್ವರ್ಗವಾಸಿಯರ ಕುರಿತು ಅಲ್ಲಾಹನು ಹೇಳಿದಂತೆ **"ತಹಿಯತುಹುಂ ಫೀಹಾ ಸಲಾಂ"** ನೆನಪಿಸುತ್ತದೆ.

ಅವರು ಹೇಳಿದರು. ಎರಡನೆಯ ಮುಖ್ಯವಾದ ವಿಷಯವೇನೆಂದರೆ ಜಲ್ಸದಲ್ಲಿ ನೀವು ಯಾರಿಂದಲೂ ಭೇಟಿಯಾಗಿ ಅವರು ತಮ್ಮ ಐಹಿಕ ಅಥವಾ ಐಹಿಕ ಸಂಕಷ್ಟಗಳ ಕುರಿತು ಮಾತನಾಡುವುದಿಲ್ಲ ಹೊರತು ಜಲ್ಸದಲ್ಲಿ ಭಾಗವಹಿಸಿದ ಪ್ರತಿಯೊಬ್ಬರ ಮಾತುಗಳಲ್ಲಿ ಧರ್ಮದ ವಿಷಯವೇ ಪ್ರಾಧಾನ್ಯತೆ ಪಡೆದಿರುತ್ತದೆ. ಅದಾಗ್ಯೂ ದೇವಸ್ಮರಣೆಯ ಮಾತುಗಳಾಗುತ್ತವೆ. ಈ ದೃಶ್ಯವು ಕೇವಲ ಜಲ್ಸ ಸಾಲಾದಲ್ಲಿ ಒದಗಿಬರುವಂತೆ ಕಾಣುತ್ತದೆ. ಆದುದರಿಂದ ಜಲ್ಸ ಸಾಲಾನವು ಅಲ್ಲಾಹನ ದೃಷ್ಟಾಂತಗಳಲ್ಲಿ ಒಂದು ದೃಷ್ಟಾಂತವಾಗಿದೆ. ಹಲವು ಜನರು ಈ ದೃಷ್ಟಾಂತದ ಮಹೋನ್ನತೆ ಅರಿಯದವರಾಗಿದ್ದಾರೆ.

* ಮುರಾದ್ ಪಾಯಿಫ್ ಸಾಹಿಬ್ ತಮ್ಮ ಅನಿಸಿಕೆಗಳನ್ನು ತಿಳಿಸುತ್ತ ಹೀಗೆ ಹೇಳಿದರು. ನಾನು ಮೊದಲ ಸಲ ಜಲ್ಸದಲ್ಲಿ ಪಾಲ್ಗೊಂಡಿದ್ದೇನೆ. ಅಷ್ಟೊಂದು ವಿಶಾಲ ಮಟ್ಟದಲ್ಲಿ ಅಷ್ಟೊಂದು ಉನ್ನತ ಶಿಸ್ತು ಮತ್ತು ಅಭೂತಪೂರ್ವ ಸ್ವಾಗತ ಅತಿಥಿ ಸತ್ಕಾರ ಕಂಡು ಬೆರಗಾಗಿದ್ದೇನೆ. ಹುಝೂರರ ಭಾಷಣಗಳು ಅಸಾಮಾನ್ಯ ರೀತಿಯಲ್ಲಿ ಪ್ರಭಾವಪೂರ್ಣ ಆಗಿದ್ದವು. ಅದನ್ನು ಕೇಳಿ ತುಂಬ ಆನಂದ ದೊರೆಯಿತು. ನಾವು ಹುಜೂರರ ಉಜ್ವಲ ಉಪದೇಶಗಳನ್ನು ಅನುಸರಿಸುತ್ತ ಅವರ ಸದ್ಭಾವನೆಗಳ ಮೇರೆಗೆ ಪೂರ್ಣರೂಪದಲ್ಲಿ ನಡೆದು ಕೊಳ್ಳುವಂತಾಗಲಿ ಎಂದು ಪ್ರಾರ್ಥಿಸುತ್ತೇನೆ. ನಾನು ಈ ಜಲ್ಸದಿಂದ ಬಹಳಷ್ಟು ಕಲಿತುಕೊಂಡಿದ್ದೇನೆ. ಮತ್ತೊಮ್ಮೆ ಬರುವ ಅಭಿಲಾಷೆಯೊಂದಿಗೆ ಮರಳುತ್ತಿದ್ದೇನೆ.

* ಮುಕರ್ರಮ್ ಅಬ್ದುಲ್ಲ ಸೀರೀನ್ ಸಾಹಿಬರ ತಂದೆ ಅಹ್ಮದಿಯರಾಗಿ ಎಷ್ಟೋ ವರ್ಷಗಳಾಗಿವೆ. ಅವರು ತಮ್ಮ ತಂದೆಯರ ಜೊತೆಯಲ್ಲಿ ರಷ್ಯಾದಲ್ಲಿರುತ್ತಿದ್ದರು. ಆದರೆ ಈಗ ತಮ್ಮ ವಿದ್ಯಾಭ್ಯಾಸಕ್ಕೋಸ್ಕರ ಹಾಲೆಂಡಿನಲ್ಲಿ ವಾಸಿಸುತ್ತಿದ್ದಾರೆ. ಅವರ ತಂದೆಯ ಮೂಲಕ ಇವರಿಗೆ ಪ್ರಚಾರ ಲಭಿಸುತ್ತಿತ್ತು. ಆದರೆ ಇನ್ನು ಅವರು ಬೈಅತ್ ಮಾಡಿರಲಿಲ್ಲ. ಈ ವರ್ಷ ಅವರು ತಮ್ಮ ತಂದೆಯವರ ಜೊತೆಯಲ್ಲಿ ಜಲ್ಸಕ್ಕೆ ಬಂದಿದ್ದರು, ಜಲ್ಸದ ಮೊದಲನೆ ದಿನ ಪ್ರಶ್ನೋತ್ತರ ಸಭೆಯ ನಂತರ ನಮ್ಮ ಮುಬಲ್ಲಿಗರಿಂದ ಮಸೀಹ್ ಮೌಊದ್(ಅ) ರವರ ಸತ್ಯತೆ ಕುರಿತು ಚರ್ಚೆಯಾಯಿತು. ಅದರ ಅಂತ್ಯದಲ್ಲಿ ಅವರಿಗೆ ತಿಳಿಸಲಾಯಿತು. ನೀವು ಅಲ್ಲಾಹನಿಂದ ದುಆ ಮಾಡಿರಿ. ಓ ಅಲ್ಲಾಹನೆ ನಾನು ಈ ಜಲ್ಸದಲ್ಲಿ ಈ ವ್ಯಕ್ತಿಯ ಸತ್ಯತೆಯ ಕುರಿತು ಸಂಶೋಧಿಸಲು ಬಂದಿರುತ್ತೇನೆ. ನೀನು ನನಗೆ ಮಾರ್ಗದರ್ಶನ ನೀಡು. ನಾನು ಈ ಮುಂಚೆಯೂ ದುಆ ಮಾಡಿದ್ದೆ. ಆದರೆ ಯಾವ ಪರಿಣಾಮವೂ ಅಗಲಿಲ್ಲ. ಅವರಿಗೆ ತಿಳಿಸಲಾಯಿತು. ಕೇವಲ ಒಂದು ಸಲ ದುಆ ಮಾಡುವುದರಿಂದ ಸಾಕಾಗುವುದಿಲ್ಲ. ಏಕೆಂದರೆ ದುಆ ಎಷ್ಟೋ ಶರತ್ತುಗಳನ್ನು ಒಳಗೊಂಡಿರುತ್ತದೆ. ಅದಕ್ಕನುಸಾರವಾಗಿ ನೀವು ಮನಃ ಪೂರ್ವಕವಾಗಿ ಕೆಲ ಸಮಯದವರೆಗೂ ದುಆ ಮಾಡಬೇಕು.

ಜಲ್ಸದ ಮರುದಿನ ಹುಝೂರರ ತಬ್ಲೀಗಿ ಅತಿಥಿಗಳ ಜೊತೆಯಲ್ಲಿ ಆದ ಸಭೆಯ ನಂತರ ಹೇಳಿದರು. ನನಗೆ ಖುರ್‌ಆನ್‌ನಿಂದ ಮಸೀಹ್ ಮೌಊದ್(ಅ) ರವರ ಸತ್ಯತೆ ಕುರಿತು ಕೇವಲ ಒಂದು ಪುರಾವೆ ತೋರಿಸಿ ನಮ್ಮ ಮುಬಲ್ಲಿಗರು ಅವರಿಗೆ ಏತಾ ತಬವ್ವಲ ವಚನ ಮತ್ತು ಇನ್ನಲ್ಲಝೀನ ಯಫ್‌ತರೂನ ಅಲಲ್ಲಾಹಿರ್ ಕಝೀಬ ಲಾ ಯುಫ್‌ಲಿಹೂನ್, ವಿವರಿಸುತ್ತ ಹುಝೂರ್(ಅ) ರವರ ಕೆಲವು ಭವಿಷ್ಯವಾಣಿಗಳು ಮತ್ತು ಜಮಾಅತಿನ ಪ್ರಗತಿಯ ವಿಷಯದಲ್ಲಿ ಮಾತನಾಡಿದಾಗ ಹೇಳಿದರು.

ನಾನು ಬೈಅತ್ ಮಾಡಬಯಸುತ್ತೇನೆ. ಏಕೆಂದರೆ ಅಲ್ಲಾಹನು ನನಗೆ ದೃಷ್ಟಾಂತವನ್ನು ತೋರಿಸಿದ್ದಾನೆ. ಅವರಿಂದ ಯಾವ ದೃಷ್ಟಾಂತ ಕಂಡಿದ್ದೀರಿ? ಎಂದು ಕೇಳಿದಾಗ ಅವರು ಹೇಳಿದರು. ನಿನ್ನೆ ರಾತ್ರಿ ತುಂಬಾ ಮನಃ ಪೂರ್ವಕವಾಗಿ ದುಃಖದಿಂದ ಸಜ್‌ದದಲ್ಲಿ ದುಆ ಮಾಡಿದ್ದೆ. ರಾತ್ರಿ ಮಲಗಿದಾಗ ಸ್ವಪ್ನ ಕಂಡಿದ್ದೆ. ಒಂದು ದೊಡ್ಡದಾದ ಗೋಡೆಯ ಮೇಲೆ ಅಲ್–ಅಹ್ಮದಿಯಾ ಎಂದು ಬರೆಯಲಾಗಿದೆ. ಮತ್ತು ಅದರಿಂದ ಅಸಾಮಾನ್ಯ ರೀತಿಯಲ್ಲಿ ಪ್ರಕಾಶ ಹೊರಡುತ್ತಿದೆ, ಮತ್ತೆ ನಾನು ಜಲ್ಸಸ್ಥಳಕ್ಕೆ ಹಾಜರಾದೆ. ಹುಝೂರರ ಜರ್ಮನ್ ಅತಿಥಿಗಳೊಡನೆ ಸಂಬೋಧನೆ ಕೇಳಿದೆ. ಆ ನಡುವೆ ನನ್ನ ಮನಸ್ಸಿನಲ್ಲಿ ಒಂದು ಅಭಿಲಾಷೆ ಮೂಡಿತು. ನನಗೆ ಹುಝೂರರ ಜೊತೆ ಅವರ ಸಮೀಪದಲ್ಲಿ ನಿಂತುಕೊಳ್ಳುವ ಸಂದರ್ಭ ಬಂದು ಒದಗಿದರೆ ಎಷ್ಟು ಒಳ್ಳೆಯದಾಗಬಹುದು. ಸ್ವಲ್ಪ ಸಮಯ ನಂತರ ಕೆಲವು ಕ್ಷಣ ನನ್ನ ಮೇಲೆ ಮಬ್ಬು ಆವರಿಸಿತು. ಮತ್ತು ನಾನು ಕಂಡೆ. ನಾನು ವೇದಿಕೆಯ ಮೇಲೆ ಹುಝೂರರ ಪಕ್ಕದಲ್ಲಿ ನಿಂತುಕೊಂಡಿದ್ದೇನೆ.

ಅವರು ಹೇಳುತ್ತಾರೆ, ಅನಂತರ ಸತ್ಯವು ನನ್ನ ಮನಸೇರಿತು. ಹುಝೂರರ ಮಸೀಹ್ ಮೌಊದ್(ಅ) ರವರ ಸತ್ಯತೆಯ ಕುರಿತು ಒಂದು ಪುರಾವೆ ಪವಿತ್ರ ಖುರ್‌ಆನ್‌ನಿಂದ ಮನಃ ಶಾಂತಿಗಾಗಿ ಕೇಳಿದ್ದೆ. ವಾಸ್ತವವೇನೆಂದರೆ ದುಆ ನಂತರ ಸ್ವಪ್ನದಲ್ಲಿಯೇ ನನಗೆ ತೃಪ್ತಿಯಾಗಿತ್ತು. ಅದಾಗ್ಯೂ ಜಲ್ಸದ ಮೂರನೆಯ ದಿನ ಸಾಮೂಹಿಕ ಬೈಅತ್‌ನಲ್ಲಿ ಅವರು ಸಹ ಭಾಗವಹಿಸಿದದರು.

* ಒಬ್ಬ ಇರಾಕಿ ಅರಬಿಯನ್ ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಹೇಳುತ್ತಾರೆ. ನಾನು ವಿವಿದ ಧಾರ್ಮಿಕ ಪಂಡಿತರ ಮತ್ತು ಮೌಲ್ವಿಗಳ ಉಗ್ರ ಪ್ರಿಯತೆಯ ಯೋಚನೆಯಿಂದ ಬೇಸತ್ತು ಜನರನ್ನು ಜಾತ್ಯಾತೀತೆಯ ಕಡೆ ಕರೆಯಲು ಪ್ರಾರಂಭಿಸಿದ್ದೆ. ಆದರೆ ನನ್ನ ಪರಿಚಯ ಅಹ್ಮದಿಯಾ ಜಮಾಅತಿನೊಂದಿಗೆ ಆದಾಗ ಇಸ್ಲಾಮಿನ ನಿಜರೂಪ ಕಂಡು ಭರವಸೆಯ ಕಿರಣ ಉದಯವಾಯಿತು. ನನ್ನ ದೃಷ್ಟಿಯಲ್ಲಿ ಹಝ್‌ರತ್ ಅಮೀರುಲ್ ಮೂಮಿನೀನ್ ಎಂತಹ ಪ್ರಕಾಶ ವಾಗಿದ್ದರೆಂದರೆ ಅದರಿಂದ ಈ ಸಮಯ ಆವರಿಸಿರುವ ಅಂಧಕಾರಮಯ ರಾತ್ರಿಯನ್ನು ಕೊನೆಗಾಣಿಸ ಬಹುದಾಗಿದೆ. ನೀವು ಪ್ರಸ್ತುತಪಡಿಸುತ್ತಿರುವ ಶಿಕ್ಷಣ, ಅರಿವು ಮತ್ತು ನಡತೆ ಅರಬ್ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಮತ್ತು ವಿಶೇಷವಾಗಿ ಇರಾಕಿನಲ್ಲಿ ಹರಡಬೇಕಾಗಿದೆ. ಅದಕ್ಕೆ ಕಾರಣವೆಂದರೆ ಜನರು ಉಗ್ರವಾದ ಮತ್ತು ಹಿಂಸಾತ್ಮಕ ಚಟುವಟಿಕೆಗಳಿಂದ ಬೇಸತ್ತು ಹೋಗಿದ್ದಾರೆ. ಅವರಿಗೆ ಅನುಗ್ರಹದ ಬದಲು ದೊರೆಯುತ್ತಿಲ್ಲ. ಅವರು ಇಸ್ಲಾಮನ್ನು ತೊರೆಯುತ್ತಿದ್ದಾರೆ.

* ಅದೇ ರೀತಿ ಮತ್ತೋರ್ವ ಅರಬಿ ಮಿತ್ರರು ಹೇಳಿದರು. ಈ ಜಲ್ಸದಲ್ಲಿ ಇಸ್ಲಾಮ್ ಶಿಕ್ಷಣ ಮಾಧ್ಯಮದಿಂದ ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ". ಸಂದೇಶವೇನು ಲಭಿಸಿದೆ. ಅದನ್ನು ಯೂರೋಪಿನಲ್ಲಿ ಇನ್ನೂ ಹೆಚ್ಚು ಪ್ರಚಾರ ಮಾಡಬೇಕಾಗಿದೆ. ಏಕೆಂದರೆ ಇಲ್ಲಿ ಇಸ್ಲಾಮಿನ ಕುರಿತು ಹಲವು ತಪ್ಪು ಕಲ್ಪನೆಗಳಿವೆ.

* ಸ್ಪೇನ್‌ನಿಂದ ಬಂದ ಓರ್ವ ಅರಬ್ ಮಿತ್ರರಾದ ಇದ್ರೀಸ್ ಸಾಹಿಬ್‌ರಿಗೂ ಸಹ ಈ ಜಲ್ಸದಲ್ಲಿ ಬೈಅತ್ ಮಾಡುವ ಭಾಗ್ಯ ದೊರೆತಿತ್ತು. ಅವರು ಹೇಳುತ್ತಾರೆ. ನಾನು ಜಲ್ಸದ ವ್ಯವಸ್ಥೆ ಮತ್ತು ಶಿಸ್ತು ಹಾಗೂ ದೊಡ್ಡ ಸಮೂಹ ಕಡು ಬೆರಗಾದೆ. ಅಷ್ಟೊಂದು ದೊಡ್ಡ ಸಮೂಹ ಒಬ್ಬ ಖಲೀಫರ ಹಿಂದೆ ಒಂದು ಮೂಲೆಯ ರೀತಿಯಲ್ಲಿ ಪೋಣಿಸಲ್ಪಟ್ಟಿತ್ತು. ಈ ದೃಶ್ಯ ಆತ್ಮೀಯವಾಗಿತ್ತು. ಅವರು ಹೇಳಿದರು. ನನ್ನ ಸಂತೋಷಕ್ಕೆ ಪಾರವೇ ಇಲ್ಲ. ನನ್ನ ಅಭಿಲಾಷೆ ಏನೆಂದರೆ ನಾನು ಪ್ರತಿ ಜಲ್ಸದಲ್ಲಿ ಭಾಗವಹಿಸುವೆನು. ಏಕೆಂದರೆ ಹಾರ್ದಿಕ ಮತ್ತು ಆತ್ಮೀಯ ನೆಲೆಯಲ್ಲಿ ಒಂದು ಸಂಬಂಧ ಈ ಜಲ್ಸದೊಂದಿಗೆ ಸ್ಥಾಪಿತಗೊಂಡಿದೆ.

* ಸ್ಪೇನ್‌ನಿಂದ ಬಂದು ಒಬ್ಬ ಅರಬ್ ಮಿತ್ರರಾದ ಮುಹಮ್ಮದ್ ಅಲ್ ಅರಬ್ಬಿ ಸಾಹಿಬ್ ಅವರಿಗೆ ಇದೇ ಜಲ್ಸದಲ್ಲಿ ಬೈಅತ್ ಮಾಡುವ ಭಾಗ್ಯ ದೊರೆಯಿತು. ಅವರು ಹೇಳುತ್ತಾರೆ. ನನಗೆ ಈ ಮಹೋನ್ನತವಾದ ಜಲ್ಸದಲ್ಲಿ ವಿವಿಧ ದೇಶಗಳಿಂದ ಬಂದ ಅಹ್ಮದಿಯುರಲ್ಲಿ ಬೆರೆತು ತುಂಬ ಸಂತೋಷವಾಯಿತು. ನಾನು ನಿಮ್ಮ ಆತಿಥ್ಯ ಹಾಗೂ ನೀತಿವಂತಿಕೆಯನ್ನು ಶ್ಲಾಘಿಸಿದೆ ಇರಲು ಸಾಧ್ಯವಿಲ್ಲ. ನಾನು ಬಹಳಷ್ಟು ಇಸ್ಲಾಮಿ ಜಮಾಅತುಗಳನ್ನು ನೋಡಿದ್ದೇನೆ. ಆದರೆ ಯಾವ ಜಮಾಅತಿನಲ್ಲೂ ಈ ಮಾದರಿ ಕಾಣಲಿಲ್ಲ. ಅಹ್ಮದಿಯಾ ಜಮಾಅತಿನ ಜನರ ಹಾಗೆ ಒಂದೇ ಕೈಯಡಿಯಲ್ಲಿ ಐಕ್ಯಮತ್ಯ ಸಾಧಿಸಿದಂತೆ.

* ಒಬ್ಬ ಸೀರಿಯನ್ ವೈದ್ಯರು ಅವರು ಜಲ್ಸದಲ್ಲಿ ಭಾಗವಹಿಸಿದ್ದರು. ಜಲ್ಸ ನಂತರ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು. ಅಲ್ಲಾಹನಾಣೆ! ಇಂತಹ ಸುವ್ಯವಸ್ಥಿತ ಸಂಘಟನೆ ನನ್ನ ಜೀವನದಲ್ಲಿ ಎಂದೂ ಕಂಡಿಲ್ಲ. ನಾವು ಆರು ಜನರನ್ನು ಸಹ ಸಹಿಸಲಾಗುವುದಿಲ್ಲ. ಇಲ್ಲಿ 40 ಸಾವಿರ ಸಮೀಪ ಜನರಿದ್ದಾರೆ. ಯಾವ ಅಡೆತಡೆಯೂ ಇಲ್ಲ. ನಾನು ಮನಃಪೂರ್ವಕವಾಗಿ ಹಝ್‌ರತ್ ಮಿರ್ಝಾ ಸಾಹಿಬ್ ನಿಮ್ಮ ಖಲಿಫರನ್ನು ಗೌರವಿಸುತ್ತೇನೆ, ಆದರಿಸುತ್ತೇನೆ. ನಾನು ಬರಾಹೀನ್ ಅಹ್ಮದಿಯಾ ಸಂಪೂರ್ಣ ಓದಿರುತ್ತೇನೆ. ಅಲ್ಲಾಹನಾಣೆ! ಹತ್ತೊಂಭತ್ತನೇ ಶತಮಾನದಲ್ಲಿ ಇಸ್ಲಾಮಿನ ರಕ್ಷಣೆಯಲ್ಲಿ ಅರಬ್ ರಾಷ್ಟ್ರಗಳಲ್ಲಾಗಲಿ ಅಥವಾ ಯಾವುದೇ ಇನ್ನಿತರ ದೇಶಗಳಲ್ಲಿ ಇಂತಹ ಯಾವ ಗ್ರಂಥವು ಬರೆಯಲಾಗುವುದಿಲ್ಲ.

ಅವರು ಹೇಳಿದರು. ಮಿರ್ಝಾ ಸಾಹಿಬ್ ಇಸ್ಲಾಮಿನ ರಕ್ಷಣೆ ಮಾಡಿದಂತೆ ಮುಸಲ್ಮಾನರಲ್ಲಿ ಅದರ ಉದಾಹರಣೆ ಸಿಗಲು ಸಾಧ್ಯವಿಲ್ಲ. ನಾನು ಪೂರ್ಣ ವಿಶ್ವಾಸದಿಂದ ಹೇಳುತ್ತೇನೆ. ಅವರು ಇಸ್ಲಾಮ್ ಮತ್ತು

ಹುಝೂರ್ ರಸೂಲುಲ್ಲಾಹ್(ಸ)ರ ಸತ್ಯ ಪ್ರೇಮಿಗಳಾಗಿದ್ದರು. ನನ್ನ ದುಆ ಏನೆಂದರೆ ನಿಮ್ಮ ಜಮಾಅತ್ ಪ್ರಗತಿ ಹೊಂದುತ್ತಿರಲಿ.

ಅರಬ್ ಬಾಂಧವರ ಹುಝೂರರೊಡನೆ ಈ ಭೇಟಿ 9 ಗಂಟೆ 15 ನಿಮಿಷದವರೆಗೆ ನಡೆಯಿತು.

ಅನಂತರ ಹುಝೂರ್ ಕೆಲ ಸಮಯಕ್ಕಾಗಿ ತಮ್ಮ ವಸತಿನಿಲಯಕ್ಕೆ ತೆರಳಿದರು.

ಹುಝೂರ್ ಜಲ್ಸ ಸ್ಥಳದ ಪುರುಷರ ಸಭಾಂಗಣದಲ್ಲಿ 9 ಗಂಟೆ 45 ನಿಮಿಷಕ್ಕೆ ಆಗಮಿಸಿ ಮಗ್ರಿಬ್ ಮತ್ತು ಇಶಾಅ ನಮಾಝ್ ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

**7 ಜೂನ್ 2015**

ಹುಝೂರ್ ಮುಂಜಾನೆ ನಾಲ್ಕೂವರೆ ಗಂಟೆಗೆ ಜಲ್ಸಸ್ಥಳದಲ್ಲಿ ಆಗಮಿಸಿ ಫಜ್ರ್ ನಮಾಝ್ ನಿರ್ವಹಿಸಿ ಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ಕಚೇರಿ ಅಂಚೆಗಳನ್ನು ಪರಿಶೀಲಿಸಿದರು ಮತ್ತು ವಿವಿಧ ರೀತಿಯ ಕಚೇರಿ ಕಾರ್ಯಗಳಲ್ಲಿ ನಿರ್ವಹಿಸಲು ತೊಡಗಿದ್ದರು.

ಕಾರ್ಯಕ್ರಮದನ್ವಯ ಮೂರುವರೆ ಗಂಟೆಗೆ ಹುಝೂರ್(ಅಬಅ) ತಮ್ಮ ಕಛೇರಿಗೆ ಆಗಮಿಸಿದರು.

ಇಸ್ಲಾಮಿಕ್ ಸ್ಟಡೀಸ್ ಪ್ರೋಫೆಸರ್ MATHAS ROHE ಸಾಹಿಬ್ ಮತ್ತು ಒಬ್ಬ ಡಿಪ್ಲೊಮೇಟ್ HARALD KINDERMANN ಅವರು ಥಿಂಕ್ ಟ್ಯಾಂಕಿನ ಸದಸ್ಯರಾಗಿದ್ದರು. ಹುಝೂರರನ್ನು ಭೇಟಿಯಾಗಲು ಬಂದಿದ್ದರು.

ಭೇಟಿಯ ಪ್ರಾರಂಭದಲ್ಲಿ ಪ್ರೋಫೆಸರರು ತಾವು ಬರೆದ ಗ್ರಂಥ ಪ್ರಸ್ತುತಪಡಿಸಿದರು.

HARALD ಸಾಹಿಬ್ ಲೋಕದ ಪ್ರಸಕ್ತ ಪರಿಸ್ಥಿತಿಗಳನ್ನು ವಿವರಿಸುತ್ತ ಹೇಳಿದರು. ಇದೀಗ ಲೋಕದಲ್ಲಿ ನಡೆಯುತ್ತಿರುವ ಗೊಂದಲಗಳು ಹಿಂದಿನ ಇಪ್ಪತ್ತು ವರ್ಷಗಳ ಇತಿಹಾಸದಲ್ಲಿಯೇ ಸರ್ವಾಧಿಕವಾಗಿವೆ. ಈ ಪರಿಸ್ಥಿತಿಗಳನ್ನು ಎದುರಿಸಲು ಜನರ ಒಗ್ಗೂಡುವಿಕೆ ಐಕ್ಯ ಅವಶ್ಯಕವಾಗಿದೆ. ಅವು ಶಾಂತಿಯನ್ನು ಪ್ರೇರೇಪಿಸುವಂತಿರಬೇಕು. ಮತ್ತು ಉಗ್ರವಾದದ ವಿರುದ್ಧ ಆಗಿರಬೇಕು. ಹುಝೂರ್ ಕೇಳಿದ ಮಾತಿಗೆ ಪ್ರತಿಕ್ರಿಯಿಸುತ್ತ ಪಾಶ್ಚಿಮಾತ್ಯ ವಿದೇಶಾಂಗ ನೀತಿಯ ಅಂಗವಾಗಿ ಹೇಳಿದರು. ಪಶ್ಚಿಮವು ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ಬಹಳ ತಪ್ಪುಗಳನ್ನು ಎಸಗಿದೆ. ಉದಾಹರಣೆಗೆ ಸೀರಿಯಾ, ಇರಾಕ್ ಮತ್ತು ಲೀಬಿಯಾದ ಯುದ್ಧಗಳ ನಿರ್ಣಯ.

ಅವರು ಹೇಳಿದರು. ಪಶ್ಚಿಮ ವಿದೇಶಾಂಗ ನೀತಿಯುನ್ನು ಮರುಪರಿಶೀಲಿಸುವ ಅಗತ್ಯವಿದೆ ಮತ್ತು ಸರಕಾರಗಳಿಗೆ ತಮ್ಮ ಪ್ರಜೆಗಳನ್ನು ಮನವರಿಕೆ ಮಾಡಬೇಕಾಗಿದೆ. ಇತರರಿಗೆ ಸಹಾಯ ನೀಡುವುದು ತಮ್ಮ ರಕ್ಷಣೆಗೋಸ್ಕರ ಅನಿವಾರ್ಯವಾಗಿದೆ.

ಹುಝೂರ್ ಹೇಳಿದರು. ಲೀಬಿಯಾದ ಪರಿಸ್ಥಿತಿ ತುಂಬ ಹದಗೆಟ್ಟಿದೆ. ಇಂದಿನ ಪರಿಸ್ಥಿತಿಗಳಲ್ಲಿ ತಕ್ಷಣ ಯಾವ ಪರಿಹಾರ ಸಾಧ್ಯವಿಲ್ಲ. ಪರಿಸ್ಥಿತಿಗಳು ಸುಧಾರಿಸಲು ದೀರ್ಘ ಅವಧಿ ಬೇಕಾಗುವುದು ಈಗ ದಾಯಿಶ್ ಲೀಬಿಯಾದಲ್ಲೂ ಪ್ರವೇಶಿಸಿದೆ ಎಂದು ತಿಳಿದು ಬಂದಿದೆ. ಅದರಿಂದ ಯೂರೋಪಿಗೆ ತುಂಬ ಅಪಾಯವಿದೆ. ಏಕೆಂದರೆ ಇಟಲಿ, ಲಿಬಿಯಾದಿಂದ ತುಂಬ ದೂರವೇನೂ ಇಲ್ಲ.

ಹುಝೂರ್ ಹೇಳಿದರು. ಉತ್ತರ ಆಫ್ರಿಕನ್ ದೇಶಗಳು ಯೂರೋಪಿಗೆ ತುಂಬ ಹತ್ತಿರವಾಗಿದೆ. ಆದುದರಿಂದ ಪಶ್ಚಿಮ ದೇಶಗಳು ಮಿರಾಕಶ್‌ಗೆ ಸಹಾಯ ನೀಡುವ ಅಗತ್ಯವಿದೆ. ಅದರಿಂದ ಅವರು ಉಗ್ರವಾದದ ಬಲೆಯಿಂದ ಉಳಿಯಬಹುದು.

ಹುಝೂರ್ ಇಸ್ಲಾಮಿಯಾತ್‌ನ ಪ್ರೋಫೆಸರ್‌ರಿಗೆ ಕೇಳಿದರು. ಜರ್ಮನ್ ಜನರು ಇಸ್ಲಾಮಿ ಕಾನೂನುಗಳ ಬಗ್ಗೆ ಆಸಕ್ತಿ ವಹಿಸಿವೆಯೇ, ಆಗ ಪ್ರೋಫೆಸರ್ ಸಾಹಿಬರು ಹೇಳಿದರು. ಆಸಕ್ತಿಯಿದೆ ಆದರೆ ಅವರಿಗೆ ಇದು ಮನವರಿಕೆ ಮಾಡಿಕೊಡಬೇಕಾಗಿದೆ. ಶರೀಅ ಕಾನೂನುಗಳು DRACONIAN ಕಾನೂನುಗಳೇನೂ ಅಲ್ಲ. ಬದಲು ಸೂಕ್ತವಾದುದು ಮತ್ತು ಜಾಣ್ಮೆಭರಿತವಾಗಿವೆ. ಅಜ್ಞಾನತೆ ದೂರ ಮಾಡುವ ಅವಶ್ಯಕತೆ ಇದೆ.

ಹುಝೂರ್ ಹೇಳಿದರು. ಇಸ್ಲಾಮ್ ಧರ್ಮದ ಹೆಸರು ಕೆಡಿಸಲು ಮಾಧ್ಯಮ ಬಹು ದೊಡ್ಡ ಪಾತ್ರ ವಹಿಸಿದೆ. ಹುಝೂರ್ ಹೇಳಿದರು. ಮುಸಲ್ಮಾನರು ಎಲ್ಲಿಯೇ ಇರಲಿ ಸ್ವಾತಂತ್ರ್ಯ ಮತ್ತು ಸುರಕ್ಷಿತವಾಗಿದ್ದಲ್ಲಿ ಅವರಿಗೆ ದೇಶೀಯ ಕಾನೂನುಗಳನ್ನು ಪಾಲಿಸುವ ಅಗತ್ಯವಿದೆ.

HARALD ಸಾಹಿಬ್ ಡಿಪ್ಲೊಮೇಟ್ ರಷ್ಯಾ ಮತ್ತು ಯುಕ್ರೇನ್‌ಗಳ ಪರಿಸ್ಥಿತಿ ಅಂಗವಾಗಿ ಹೇಳಿದರು. ಪ್ರಸಕ್ತ ಪರಿಸ್ಥಿತಿಗಳಿಂದಾಗಿ ರಕ್ಷಣಾ ವ್ಯವಸ್ಥೆ ಹದಗೆಟ್ಟು ಹೋಗಿವೆ. ರಷ್ಯಾ ಯುಕ್ರೇನಿನಿಂದ crimea ಕ್ಷೇತ್ರ ಪಡೆಯುತ್ತಿರುವುದು U.N.O ಕಾನೂನುಗಳ ಉಲ್ಲಂಘನೆಯಾಗಿದೆ.

ಹುಝೂರ್ ಕೇಳಿದ ಮಾತಿಗೆ ಪ್ರತಿಕ್ರಿಯಿಸುತ್ತಾ ಮಧ್ಯಪ್ರಾಚ್ಯದಲ್ಲಿ ಶಾಂತಿ ಅಂಗವಾಗಿ ಡಿಪ್ಲೋಮೇಟ್ ಹೇಳಿದರು. ಅವರು ಶಾಂತಿಯ ಭರವಸೆ ಮೇಲಿಲ್ಲ. ಅಲ್ಲಿ ಎಷ್ಟೊಂದು ಸಲಹೆಗಾರರಿದ್ದಾರೆಂದರೆ ಒಗ್ಗಟ್ಟಿನ ಏಕಮೇವ ತೀರ್ಮ ಕಠಿಣವಾಗಿದೆ. ಪ್ರಸಕ್ತ ಉಪಾಯಗಳು ಮತ್ತು ಸರಕಾರ ತೀರ ವಿಫಲವಾಗಿವೆ ಮತ್ತು ಶಾಂತಿಯ ಭರವಸೆ ಅಂತ್ಯಗೊಳ್ಳುತ್ತಿವೆ.

ಈ ಭೇಟಿಯು ನಾಲ್ಕೂ ಗಂಟೆಯವರೆಗೆ ನಡೆಯಿತು. ಕೊನೆಯಲ್ಲಿ ಆ ಇಬ್ಬರೂ ಅತಿಥಿಗಳು ಹುಝೂರರ ಜೊತೆಯಲ್ಲಿ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

**(ಮುಂದುವರಿಯುವುದು)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಈ ವಚನದಲ್ಲಿ ತಿಳಿಸಲಾಗಿದೆ. **"ಉಖ್‌ಬದ್ದರ್"** ತಾತ್ಪರ್ಯ್ ಶಾಶ್ವತ ವಾಸಕ್ಕಿರುವ ಸ್ವರ್ಗೀಯ ತೋಟಗಳು, ಅಥವಾ ಅದರ ಅರ್ಥ ಬುದ್ಧಿಶಾಲಿಗಳು ಶಾಶ್ವತವಾದ ಸ್ವರ್ಗಗಳ ವಾರಸುದಾರರಾಗುವರು. **"ವುಮನ್ ಸಲಹ ಮಿನ್ ಆಬಾಯಿಹಿಮ್"** ಅವರ ತಂದೆ ತಾತಂದಿರು, ಬಾಳ ಸಂಗಾತಿಗಳು, ಸಂತತಿಗಳು, ಇವರ ಪೈಕಿ ಸಜ್ಜನರಾದ ಎಲ್ಲರೂ ಸಹ ಸ್ವರ್ಗಕ್ಕೆ ಪ್ರವೇಶ ಮಾಡುವರು. ಈ ವಚನದಲ್ಲಿ ಒಂದು ಮಹೋನ್ನತ ವಾಸ್ತವ ಹಾಗೂ ಸತ್ಯವನ್ನು ಸ್ಪಷ್ಟಪಡಿಸಲಾಗಿದೆ. ಈ ವಾಸ್ತವ ಮತ್ತು ಸತ್ಯವನ್ನು ಕೇವಲ ಪವಿತ್ರ ಖುರ್‌ಆನ್ ಉಲ್ಲೇಖಿಸಿದೆಯೇ ಹೊರತು ಲೋಕದ ಯಾವ ಗ್ರಂಥ ಈ ಸಮಸ್ಯೆಯನ್ನು ಎತ್ತಿಕೊಳ್ಳಲಿಲ್ಲ. ಲೋಕದಲ್ಲಿ ಯಾವ ವ್ಯಕ್ತಿಯೂ, ಯಾವ ಸತ್ಕರ್ಮವಾಗಲಿ, ಅಥವಾ ದುಷ್ಕರ್ಮವಾಗಲಿ ಭಾಗಿದಾರರಲ್ಲದೇ ಮಾಡಲು ಸಾಧ್ಯವಿಲ್ಲ. ವ್ಯಾಪಾರಸ್ಥರು ವ್ಯಾಪಾರದ ಯಶಸ್ಸಾಗಲಿ, ಕೃಷಿ ಕ್ಷೇತ್ರದಲ್ಲಿ ಕೃಷಿಕರು ಯಶಸ್ಸಿನಲ್ಲಿ ನೂರಾರು, ಸಾವಿರಾರು ಜನರು ತಿಳಿದು ತಿಳಿಯದೇ ಭಾಗಿದಾರರಾಗಿರುತ್ತಾರೆ. ಅದೇ ಕಾರಣದಿಂದ ಇಸ್ಲಾಮಿ ಶರೀಅತ್ (ಧರ್ಮಸಂಹಿತೆ) ಝಕಾತ್ (ದಿನ) ನಿಗದಿಪಡಿಸಿದೆ. ಈ ರೀತಿ ಇತರ ಜನರ ಹಕ್ಕುಗಳನ್ನು ಸಂರಕ್ಷಿಸಿದೆ.

ಅದೇ ರೀತಿ ಬೇರೆ ಕಾರ್ಯಗಳದ್ದಾಗಿವೆ. ಉದಾಹರಣೆಗೆ ಭಾವಿಸಿಕೊಳ್ಳಿ. ಒಬ್ಬ ವ್ಯಕ್ತಿ ಪ್ರಚಾರಕ್ಕೆ ತೆರಳುತ್ತಾನೆ. ಅದರಲ್ಲಿ ಅವನ ಪತ್ನಿಯ ಪಾಲೂ ಇದೆ. ಏಕೆಂದರೆ ಅವಳು ಅವನಿಲ್ಲದಿರುವಾಗ ತಮ್ಮ ಮನೆ ಮಕ್ಕಳನ್ನು ನೋಡಿಕೊಳ್ಳುತ್ತಾಳೆ. ಅವರನ್ನು ಪೋಷಿಸುತ್ತಾಳೆ. ಒಂದು ವೇಳೆ ಅವಳು ಮಕ್ಕಳನ್ನು ನೋಡಿಕೊಳ್ಳದಿದ್ದರೆ ಪ್ರಚಾರಕನಿಗೆ ಪ್ರಚಾರಕ್ಕೆ ತೆರಳಲು ಆತಂಕವಾಗುವುದು. ಅದೇ ರೀತಿ ಒಂದು ವೇಳೆ ಹೆತ್ತವರು ಅವರಿಗೆ ಒಳ್ಳೆಯ ತರಬೇತಿ ನೀಡದಿರುತ್ತಿದ್ದರೆ ಅವರು ಧರ್ಮಕಾರ್ಯಗಳು ಮಾಡಲು ಹೇಗೆ ಸಾಧ್ಯವಾಗುತ್ತಿತ್ತು. ಅಥವಾ ಮಕ್ಕಳು ಹೆತ್ತವರಿಗೆ ಸಮಾಧಾನ ನೀಡಲಿಲ್ಲವೆಂದಾದರೆ ಅವರು ಹೇಗೆ ಸತ್ಕರ್ಮಗಳಲ್ಲಿ ಭಾಗವಹಿಸಲು ಸಾಧ್ಯ. ಆದುದರಿಂದ ಮನುಷ್ಯನು ಸತ್ಕರ್ಮಗಳಲ್ಲಿ ತನ್ನ ಸಂಬಂಧಿಕರ ನೆರವು ಪಡೆದು ಪ್ರಗತಿ ಸಾಧಿಸುತ್ತಾನೆ. ಕಾರಣ ಅವರ ಪ್ರತಿಫಲ ಅವರೂ ಪಡೆಯುತ್ತಾರೆ. ಅದಕ್ಕಾಗಿ ಈ ಕಾನೂನು ಮಾಡಲಾಗಿದೆ. ಕುಟುಂಬದಲ್ಲಿ ಯಾರು ಎಲ್ಲರಿಗಿಂತ ಹಿರಿಯ ಸ್ಥಾನ ಪಡೆದಿರುವನೋ ಅವನ ಬಳಿಯಲ್ಲಿಯೇ ಎಲ್ಲ ಕಿರಿಯರು ಇರುವರು. ಶರತ್ತೇನೆಂದರೆ ಅವರು ಮುಕ್ತಿಪಡೆದಿರುವರಾಗಿರಬೇಕು. ಈ ವಚನದಲ್ಲಿ ಬಳಸಲಾದ **"ಝೌಜ್"** ಪದ ನನ್ನ ದೃಷ್ಟಿಯಲ್ಲಿ ಅದರ ಅರ್ಥ ಜೋಡಿ ಎಂದಾಗಿರಬೇಕು. ಅಂದರೆ ಸಂಗಡಿಗ, ಈ ಪುರುಷನಾಗಲಿ, ಮಹಿಳೆಯಾಗಲಿ, ನನ್ನ ದೃಷ್ಟಿಯಲ್ಲಿ ಸತ್ಕರ್ಮಗಳಲ್ಲಿ ಪಾಲುದಾರರಾದ ಎಲ್ಲರೂ ಶಾಮೀಲಾಗಿದ್ದಾರೆಯೇ ಹೊರತು ಕೇವಲ ದಂಪತಿಗಳಲ್ಲ ಅದರಿಂದ ಮಹಿಳೆಯರ ಬಗ್ಗೆ ಇರುವ ಪ್ರಶ್ನೆಯ ಪರಿಹಾರವು ದೊರೆಯುತ್ತದೆ. ಏಕೆಂದರೆ ಅವಳು ಏಕೆ ಪ್ರವಾದಿತ್ವದ ಜ್ಞಾನ ಪಡೆಯುವುದಿಲ್ಲ. ಏಕೆಂದರೆ ಈ ವಚನದಿಂದ ಸಿಗುವ ಅರ್ಥವೇನೆಂದರೆ ನಂಬಿರುವ ಪತ್ನಿಯರಿಗೂ ಅದೇ ಸ್ಥಾನದಲ್ಲಿ ಇರಿಸಲಾಗುವುದು. ಯಾವ ಸ್ಥಾನದಲ್ಲಿ ನಬಿ ಇರುತ್ತಾರೆ. ಅಂತಹ ಸೃಷ್ಟಿಯ ನೆಲೆಯಲ್ಲಿ ಅವರಿಗೆ ಲೋಕದಲ್ಲಿ ಪ್ರವಾದಿತ್ವ ಲಭಿಸುವುದಿಲ್ಲ. ಆದರೆ ಅವರು ಆ ಅನುಗ್ರಹಗಳಲ್ಲಿ ಅಂದರೆ ನಬಿಯವರಿಗೆ ದೊರೆತ ಸ್ಥಾನದಲ್ಲಿ ಅವರೊಂದಿಗೆ ಇವರೂ ಶಾಮೀಲಾಗುವರು. ಈಗ ನೋಡಿ ರಸೂಲುಲ್ಲಾಹ್(ಸ) ರಂತೂ ಓರ್ವ ವ್ಯಕ್ತಿಯಾಗಿದ್ದಾರೆ. ಆದರೆ ಅವರಿಗೆ ಪತಿಯರು ಹನ್ನೊಂದು, ಅವರೂ ಸಹ ಆ ಅನುಗ್ರಹದಲ್ಲಿ ಶಾಮೀಲಾಗುವರು. ಅದೇ ರೀತಿ ನಬಿಯರ **"ಝೌಜ್"** (ಪತ್ನಿ) ಸಿದ್ದೀಖ್ ಆಗುತ್ತಾರೆ. ಮಹಿಳೆಯರಿಗೆ ಸಿದ್ದೀಖ್ ದರ್ಜೆ ಪಡೆಯುವುದರಿಂದ ತಡೆಯಲಾಗದು. ಇದೀಗ ಯಾವ ಮಹಿಳೆ ಸಿದ್ದೀಖ್ ದರ್ಜೆ ಪಡೆಯುವರೋ ಅವರು ಸಹ ರಸೂಲುಲ್ಲಾಹ್(ಸ) ರವರ ಬಳಿ ತಲುಪುವರು ಏಕೆಂದರೆ ಸಿದ್ದೀಖಿಯತ್ ನೆಲೆಯಲ್ಲಿ ಎಲ್ಲರೂ ರಸೂಲುಲ್ಲಾಹ್(ಸ) ರವರ ಜೊತೆಗೂಡುವರು. **(ತಫ್‌ಸೀರೆ ಕಬೀರ್, ಸಂಪುಟ–3, ಪುಟ–416–417, ಮುದ್ರ ಖಾದಿಯಾನ್ 2010)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಹೊಸ ಇಸ್ಲಾಮಿನ ಕಾರಣದಿಂದಾಗಿ ಮುಹಮ್ಮದ್(ಸ) ರವರು ಮತ್ತೆ ಮೊದಲಿನ ಘನತೆ ಗೌರವ ಪಡೆಯುವಂತೆ ಆಗಿದೆ. ಈ ಹೊಸ ಬೆಳವಣಿಗೆಗಳನ್ನು ನಾವು ಸುಲಭದಲ್ಲಿ ಗುರುತಿಸಬಹುದಾಗಿದೆ. ಮತ್ತೊಂದು ವಿಷಯವೇನೆಂದರೆ ಈ ಹೊಸ ಇಸ್ಲಾಮ್ ಕೇವಲ ತನ್ನ ರಕ್ಷಣಾತ್ಮಕ ಅರ್ಹತೆ ಹೊಂದಿದ್ದಲ್ಲ. ಬದಲು ಆಕ್ರಮಣದ ಅರ್ಹತೆಯೂ ಹೊಂದಿದೆ. ವಿಷಾದದ ಸಂಗತಿ ಎಂದರೆ ನಮ್ಮಲ್ಲಿಯೂ ಕೆಲ ಚಿಂತಕರ ಒಲವು ಅವರತ್ತ ವಾಲುತ್ತಿದೆ.

ಅಂದ ಹಾಗೆ ಹಝ್ರತ್ ಮಸೀಹ್ ಮೌಊದ್(ಅ) ದಾವೆ ಹೂಡಿ ಇನ್ನು ನಾಲ್ಕೇ ವರ್ಷ ಕಳೆದಿದ್ದವು. ಪಾದರಿಗಳ ಹೃದಯಗಳಲ್ಲಿ ಅವರ ಪ್ರತಾಪ ಆವರಿಸತೊಡಗಿತ್ತು. ಕ್ರೈಸ್ತ ಲೋಕವು ಭಾವಿಸತೊಡಗಿತು. ಕ್ರೈಸ್ತ ಮತದ ಅವನತಿ ಮತ್ತು ಇಸ್ಲಾಮಿನ ಉನ್ನತಿಯ ಸಮಯ ಬಂದೊದಗಿದೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಚರ್ಚಾಕೂಟದ ಕೊನೆಯ ದಿನ 5 ಜೂನ್ 1893 ರಂದು ಈ ಭವಿಷ್ಯವಾಣಿ ನುಡಿದರು.

"ಅಂದ ಹಾಗೆ ಡೆಪ್ಯೂಟಿ ಅಬ್ದುಲ್ ಆಥಮ್ ಸಾಹಿಬ್ ಪವಿತ್ರ ಖುರ್‌ಆನ್‌ನ ಪವಾಡಗಳನ್ನು ಉದ್ಧಟತನದಿಂದಾಗಿ ತಿರಸ್ಕರಿಸಿದರು. ಮತ್ತು ಅದರ ಭವಿಷ್ಯವಾಣಿಗಳನ್ನು ನಿರಾಕರಿಸಿದರು ಮತ್ತು ನನ್ನೊಡನೆ ಇದೇ ಸಭೆಯಲ್ಲಿ ಮೂರು ರೋಗಿಗಳನ್ನು ಪ್ರಸ್ತುತಪಡಿಸಿ ಅಪಹಾಸ್ಯ ಮಾಡಿದರು. ನಿಜವಾಗಿಯೂ ಇಸ್ಲಾಮ್ ಧರ್ಮ ಸತ್ಯವೆಂದಾದರೆ ಮತ್ತು ನೀವು ನಿಜವಾಗಿಯೂ ದೇವವಾಣಿ ಪಡೆದವರಾಗಿದ್ದರೆ ಈ ಮೂರು ರೋಗಿಗಳನ್ನು ಗುಣಪಡಿಸಿರಿ. ಅದಾಗ್ಯು ನನ್ನ ವಾದ ಇದಾಗಿರಲಿಲ್ಲ. ನಾನು ಸರ್ವಶಕ್ತನು ಎಂದು. ಪವಿತ್ರ ಖುರ್‌ಆನ್ ಅನ್ವಯವು ಇದು ಸಾಧುವಿರಲಿಲ್ಲ. ಬದಲು ಇದು ಕ್ರೈಸ್ತ ಸಾಹಿಬರ ವಿಶ್ವಾಸವಾಗಿತ್ತು. ಅದು ಇಂಜಿಲಿನಲ್ಲಿ ಬರೆದದ್ದಾಗಿತ್ತು. ನೀವು ಸತ್ಯ ವಿಶ್ವಾಸಿಗಳೆಂದಾದರೆ ಕುಂಟರನ್ನು, ಅಂಧರನ್ನು ಮತ್ತು ಕಿವುಡರನ್ನು ಗುಣಪಡಿಸುವಿರಿ. ಆದರೂ ನಾನು ದುಆ ಮಾಡುತ್ತಿದ್ದೆ. **ಇಂದು ರಾತ್ರಿ ನನಗೆ ತಿಳಿಸಲಾಯಿತು. ಅದಾಗ್ಯೂ ನಾನು ಬಹಳ ಕಳವಳಗೊಂಡು ಅಲ್ಲಾಹನ ಆಸ್ಥಾನದಲ್ಲಿ ದುಆ ಮಾಡಿದೆ. ಈ ವಿಷಯದಲ್ಲಿ ನೀನೇ ತೀರ್ಮಾನ ಕೈಗೊಳ್ಳು, ನಾವಂತೂ ನಿನ್ನ ದುರ್ಬಲ ದಾಸರಾಗಿದ್ದೇವೆ. ನಿನ್ನ ತೀರ್ಮಾನವಲ್ಲದೇ ನಮಗೇನು ಮಾಡಲು ಸಾಧ್ಯವಿಲ್ಲ. ಆಗ ನನಗೆ ಅವನು ಸುವಾರ್ತೆಯ ನಿಮಿತ್ತ ಈ ದೃಷ್ಟಾಂತವನ್ನು ನೀಡಿದ್ದಾನೆ. ಈ ಚರ್ಚಾಕೂಟದ ಉಭಯ ಪಕ್ಷಗಳಲ್ಲಿ ಯಾವ ಪಕ್ಷ ಉದ್ಧಟತನದಿಂದ ಸುಳ್ಳನ್ನು ನೆಚ್ಚಿಕೊಂಡಿದೆ ಮತ್ತು ಸತ್ಯವಾದ ದೇವನನ್ನು ಕೈಬಿಡುತ್ತಿದೆ ಮತ್ತು ಓರ್ವ ದುರ್ಬಲ ಮನುಷ್ಯನನ್ನು ದೇವನನ್ನಾಗಿ ಮಾಡುತ್ತಿದೆ. ಇವೇ ದಿನಗಳಲ್ಲಿ ಚರ್ಚಾಕೂಟದ ಅನುಗುಣವಾಗಿ ಅಂದರೆ ಒಂದು ದಿನ, ಒಂದು ತಿಂಗಳಿನ ಲೆಕ್ಕದಲ್ಲಿ ಅಂದರೆ 15 ತಿಂಗಳುಗಳಲ್ಲಿ ನರಕಕ್ಕೆ ಹಾಕಲಾಗುವುದು. ಮತ್ತು ಅವನಿಗೆ ಘೋರ ಅಪಮಾನ ಒದಗುವುದು. ಶರತ್ತೆಂದರೆ ಅವರು ಸತ್ಯವಂತರೆಂದು ರುಜುವಾಗದಿದ್ದರೆ ಮತ್ತು ಯಾವ ವ್ಯಕ್ತಿ ಸತ್ಯಪಥದಲ್ಲಿರುವರೋ ಮತ್ತು ಸತ್ಯದ ಜೀವನವನ್ನು ನಂಬುವರೋ, ಅವರಿಗೆ ಅವನಿಂದ (ದೇವನಿಂದ) ಗೌರವ ಲಭಿಸುವುದು. ಈ ಭವಿಷ್ಯವಾಣಿ ಪೂರ್ಣಗೊಳ್ಳುವ ಸಮಯ ಬಂದಾಗ ಕೆಲ ಅಂಧರು, ದೃಷ್ಟಿ ಹೊಂದುವರು, ಕುಂಟರು ನಡೆದಾಡುವವರು, ಮತ್ತು ಕಿವುಡರು ಆಲಿಸತೊಡಗುವರು.**

ಅದೇ ರೀತಿ, ಯಾವ ರೀತಿ ಅಲ್ಲಾಹನು ಇಷ್ಟಪಡುವನು, **ಅಲ್‌ಹಮ್ದುಲಿಲ್ಲಾಹ್** ಒಂದು ವೇಳೆ ಈ ಭವಿಷ್ಯವಾಣಿ ಅಲ್ಲಾಹನಿಂದ ಪ್ರಕಟಗೊಳ್ಳದೆ ಇರುತ್ತಿದ್ದರೆ ನಮ್ಮ ಈ 15 ದಿನಗಳು ವ್ಯರ್ಥ ಹೋಗುತ್ತಿದ್ದವು. ದುಷ್ಕರ್ಮ ಮನುಷ್ಯನ ಸ್ವಭಾವವಾಗಿರುತ್ತದೆ. ಅವನು ನೋಡಿಯೂ ನೋಡದಂತಾಗುತ್ತಾನೆ. ಆಲಿಸಿಯೂ ಆಲಿಸದಂತಾಗುತ್ತಾನೆ. ತಿಳಿದಿದ್ದರೂ ತಿಳಿಯದವನಂತಾಗುತ್ತಾನೆ. ಅದಾಗ್ಯೂ ಸಾಹಸ ತೋರಿಸುತ್ತಾನೆ. ಮತ್ತು ಗೋರಿ ಮಾಡುತ್ತಾನೆ. ದೇವನಿದ್ದಾನೆಂದು ಅರಿಯುವುದಿಲ್ಲ. ಆದರೆ ನಾ ಬಲ್ಲೇನು. ಈಗ ತೀರ್ಮಾನದ ಸಮಯ ಬಂದಿರುತ್ತದೆ. ಏಕಾದರೂ ಈ ಚರ್ಚೆಯಲ್ಲಿ ನನಗೆ ಬರಲು ಸಾಧ್ಯವಾಯಿತು ಎಂದು ನಾನು ಅಚ್ಚರಿಪಟ್ಟಿದ್ದೆ. ಸಾಧಾರಣ ಇತರ ಜನರು ಸಹ ಚರ್ಚೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಇದೀಗ ಈ ವಾಸ್ತವ ಬಯಲಿಗೆ ಬಂದಿದೆ. ಇದರಿಂದ ಒಂದು ದೃಷ್ಟಾಂತ ತೋರಿಸಬೇಕಾಗಿತ್ತು. ನಾನು ಈ ಸಮಯ ಪ್ರಮಾಣ ಮಾಡಿ ಹೇಳುತ್ತೇನೆ. ಈ ಭವಿಷ್ಯವಾಣಿ ಸುಳ್ಳು ಎಂದಾದರೆ ಅಲ್ಲಾಹನ ದೃಷ್ಟಿಯಲ್ಲಿ ಸುಳ್ಳುಗಾರನಾಗಿರುವರು. ಈ ತಾರೀಖಿನಿಂದ 15 ತಿಂಗಳುಗಳ ಒಳಗೆ ಮರಣದ ಶಿಕ್ಷೆ ಹೊಂದಿ ನರಕಕ್ಕೆ ಸೇರಲಿಲ್ಲವೆಂದಾದರೆ, ನಾನು ಯಾವ ಶಿಕ್ಷೆಗೆ ಬೇಕಾದರು ಸಿದ್ಧನಿದ್ದೇನೆ. ನನ್ನನ್ನು ಅಪಮಾನಿತಗೊಳಿಸಬಹುದು. ನನ್ನ ಕೊರಳಲ್ಲಿ ಹಗ್ಗ ಬಿಗಿಯಬಹುದು. ನನ್ನನ್ನು ಶೂಲಕ್ಕೆ ಹಾಕಬಹುದು, ಎಲ್ಲಾ ಮಾತಿಗೂ ಸಿದ್ಧನಿದ್ದೇನೆ.

ನಾನು ಪ್ರತಾಪಶಾಲಿಯಾದ ಅಲ್ಲಾಹನ ಆಣೆವಹಿಸಿ ಹೇಳುವೆನು. ಅವನು ಅವಶ್ಯವಾಗಿ ಹಾಗೆಯೇ ಮಾಡುವನು, ಅವಶ್ಯವಾಗಿ, ಅವಶ್ಯವಾಗಿ ಮಾಡುವನು. ಭೂಮ್ಯಾಕಾಶ ಅಲುಗಾಡಬಹುದು. ಆದರೆ ಅವನ ಮಾತುಗಳು ಅಲುಗಾಡಲು ಸಾಧ್ಯವಿಲ್ಲ.

ಇದೀಗ ಡೆಪ್ಯೂಟಿ ಸಾಹೇಬರಿಂದ ಕೇಳುತ್ತೇನೆ. ಒಂದು ವೇಳೆ ಈ ದೃಷ್ಟಾಂತ ಪೂರ್ಣಗೊಂಡರೆ ಇದೆಲ್ಲಾ ನಿಮ್ಮ ಅನಿಸಿಕೆ ಪ್ರಕಾರ ಒಂದು ಪರಿಪೂರ್ಣ ಭವಿಷ್ಯವಾಣಿ ಮತ್ತು ದೇವನ ಭವಿಷ್ಯವಾಣಿ ಎಂದಾಗುವುದೋ ಅಥವಾ ಇಲ್ಲವೋ, ಮತ್ತು ರಸೂಲುಲ್ಲಾಹ್(ಸ) ರವರು ಸತ್ಯವಾದ ಪ್ರವಾದಿ ಎಂಬ ಕುರಿತು, ಅದನ್ನು ಬೈಬಲ್ ಒಳಗೆ ನೀವು ದಜ್ಜಾಲ್ ಎಂದು ಪರಿಗಣಿಸುವಿರಿ, ಒಂದು ಶಕ್ತಿಯುತ ಪುರಾವೆ ಎಂದಾಗುವುದೋ ಅಥವಾ ಇಲ್ಲವೋ, ಈಗ ಅದಕ್ಕಿಂತ ಹೆಚ್ಚು ನಾನು ಏನು ಬರೆಯಲು ಸಾಧ್ಯ. ಅದಾಗ್ಯೂ ಅಲ್ಲಾಹನೇ ತೀರ್ಮಾನಿಸಿರುವನು. ಈಗ ಅನಾವಶ್ಯಕವಾಗಿ ನಗುವ ಪ್ರಸಂಗವಾಗಿ ಉಳಿದಿಲ್ಲ. ನಾನು ಸುಳ್ಳುಗಾರ ಎಂದಾದರೆ ನನಗಾಗಿ ಗಲ್ಲು ಸಿದ್ಧಪಡಿಸಿಡಿ. ಎಲ್ಲಾ ಶೈತಾನಗಳಿಂದಲು, ದುಷ್ಕರ್ಮಿಗಳಿಂದಲೂ ಮತ್ತು ಶಾಪಗ್ರಸ್ಥರಿಂದಲೂ ಹೆಚ್ಚು ನನಗೆ ಶಾಪಗ್ರಸ್ಥನನ್ನಾಗಿಸಿರಿ. ಆದರೆ ನಾನು ಸತ್ಯವಂತ ಎಂದಾದರೆ, ಮನುಷ್ಯನನ್ನು ದೇವನನ್ನಾಗಿ ಮಾಡಬೇಡಿರಿ. ತೌರಾತನ್ನು ಓದಿ ನೋಡಿ. ಅದರ ಆದ್ಯತೆಯ ಮತ್ತು ಸ್ಪಷ್ಟವಾದ ಶಿಕ್ಷಣವೇನಿದೆ ಎಂದು. ಮತ್ತು ಎಲ್ಲಾ ಪ್ರವಾದಿಗಳು ಏನು ಶಿಕ್ಷಣ ನೀಡುತ್ತಾ ಬಂದಿರುವರು. ಮತ್ತು ಲೋಕವೆಲ್ಲ ಎತ್ತ ಸಾಗಿದೆ ಎಂದು. ಈಗ ನಾನು ನಿಮ್ಮಿಂದ ಬಿಡುವು ಬಯಸುತ್ತೇನೆ. ಅದಕ್ಕಿಂತ ಹೆಚ್ಚು ಏನು ಹೇಳಬಲ್ಲೆ.

15 ತಿಂಗಳುಗಳು ಕಳೆದಿದೆ , ನಂತರ ಕ್ರೈಸ್ತರು ಹುಯಿಲೆಬ್ಬಿಸಿದರು. ಆಥಮನು ಮರಣ ಹೊಂದಿಲ್ಲ ಮತ್ತು ಭವಿಷ್ಯವಾಣಿ ತಪ್ಪಾಗಿದೆ ಎಂದು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಗ್ರಂಥ "ಅನ್ವಾರುಲ್ ಇಸ್ಲಾಂ" ಮತ್ತು "ಝಿಯಾಉಲ್‌ಹಖ್" ಗಳಲ್ಲಿ ಸಾಬೀತುಪಡಿಸಿದರು. ಆಥಮನು ಸತ್ಯದೆಡೆ ರುಜುವಾತುಪಡಿಸಿರುವನು. ಆ ಕಾರಣದಿಂದ ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಅವನಿಗೆ ಅವಕಾಶ ನೀಡಿರುವನು. ಆದರೆ ಅತಿ ಶೀಘ್ರದಲ್ಲಿ ಅಲ್ಲಾಹನು ಅವನನ್ನು ಹಿಡಿಯುವನು ಮತ್ತು ತನ್ನ ವಿನಾಶದ ಸಾಮಾಗ್ರಿಗಳು ತನ್ನ ಕೈಗಳಿಂದಲೇ ಸಿದ್ಧಪಡಿಸಿಕೊಳ್ಳುವನು. ಎಲ್ಲಾ ವಿವರಗಳು ನಾವು ಇನ್‌ಶಾಅಲ್ಲಾಹ್ ಮುಂಚಿನ ಸಂಚಿಕೆಯಲ್ಲಿ ವಿವರಿಸುವೆನು.

**(ಮನ್ಸೂರ್ ಅಹ್ಮದ್ ಮಸ್ರೂರ್)**

## ತಹ್ರೀಕ್ ಜದೀದ್ ಸಂಪೂರ್ಣ ಚಂದಾ ಪಾವತಿಸಲು ಗಮನವಹಿಸಿ

ಜಮಾಅತ್ ಬಾಂಧವರಿಗೆ ತಿಳಿದಿರುವಂತೆ ತಹ್ರೀಕ್ ಜದೀದ್‌ನ ಹೊಸ ವರ್ಷ ಪ್ರಾರಂಭಗೊಂಡು ಆರು ತಿಂಗಳಿಗಿಂತ ಹೆಚ್ಚು ಅವಧಿ ಕಳೆದುಹೋಗಿದೆ. ವಕಾಲತ್ ಮಾಲ್‌ನ ಮಾಹಿತಿ ಪ್ರಕಾರ ಇನ್ನು ಬಹಳಷ್ಟು ವಾಗ್ದಾನ ಮಾಡಿರುವವರು ಚಂದ ನೀಡಬೇಕಾಗಿದೆ. ಭಾರತದ ಎಲ್ಲ ಜಿಲ್ಲಾ ಅಮೀರುಗಳು, ಸ್ಥಳಿಯ ಅಮಿರರು, ಅಧ್ಯಕ್ಷರುಗಳು, ತಹ್ರೀಕ್ ಜದೀದ್ ಕಾರ್ಯದರ್ಶಿಗಳೊಂದಿಗೆ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಸ್ಥಳಿಯ ಮುಬಲ್ಲಿಗೀನ್ ಅಥವಾ ಮುಅಲ್ಲಿಮೀನ್ ಅವರ ಸಹಯೋಗದೊಂದಿಗೆ ತಹ್ರೀಕ್ ಜದೀದ್ ಚಂದ ಪಾವತಿಯ ಕುರಿತು "ತಹ್ರೀಕ್ ಜದಿದ್ ಹಫ್ತಮಾಲ್" ಆಚರಿಸಬೇಕು. ಏಕೆಂದರೆ ಸಯ್ಯದ್‌ನಾ ಹುಝೂರೆ ಅನ್ವರ್ (ಅಬಅ) ರವರು ನಿಗದಿಪಡಿಸಿದ ಗುರಿಯ ಪ್ರಕಾರ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಗುರಿ ಸಾಧಿಸುವ ಭಾಗ್ಯ ನಮ್ಮದಾಗಲಿ. ಆಮೀನ್!

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿದರು. "ತಹ್ರೀಕ್ ಜದೀದ್ ನನ್ನ ಕರೆಯಾಗಿದೆ ಎಂದು ಭಾವಿಸಬೇಡಿರಿ. ಬದಲು ಅದರ ಒಂದೊಂದು ಪದ ನಾನು ಪವಿತ್ರ ಖುರ್‌ಆನ್‌ನಿಂದ ಸಾಬೀತು ಪಡಿಸುವೆನು. ಮತ್ತು ಅದರ ಒಂದೊಂದು ಆಜ್ಞೆಯು ಸಹ ರಸೂಲೆ ಕರೀಂ(ಸ) ರವರ ನುಡಿಗಳಿಂದ ತೋರಿಸಬಲ್ಲೆನು. ಆದರೆ ಯೋಚಿಸಲು ಮಿದುಳು ಮತ್ತು ವಿಶ್ವಾಸ ಹೊಂದಿದ ಹೃದಯದ ಅಗತ್ಯವಿದೆ. ಆದುದರಿಂದ ಅದನ್ನು ನಾನು ಹೇಳುತ್ತಿದ್ದೇನೆ ಎಂದೂ ಭಾವಿಸಬೇಡಿರಿ, ನನ್ನ ಕಡೆಯಿಂದ ಎಂದೂ ಭಾವಿಸಬೇಡಿರಿ. ಬದಲು ಯಾರ ಕೈಯಲ್ಲಿ ನಿಮ್ಮ ಜೀವವಿದೆಯೇ ಅದು ಅವನ ಮಾತಾಗಿದೆ. ನಾನು ತೀರಿಹೋದರೂ ಅವನು ಇತರರಿಂದಲೂ ಅದೇ ಹೇಳಿಸುವನು, ಅವರು ತೀರಿಹೋದರೆ ಅವರ ನಂತರ ಬೇರೆಯವರಿಂದಲೂ.... ಅಂತೂ ನೀವು ಅದನ್ನು ಪಾಲಿಸುವವರೆಗೆ ಅವನು ಬಿಡಲಾರನು. (ಖುತ್‌ಬ ಜುಮುಅ 13 ಡಿಸೆಂಬರ್ 1935, ಅಲ್‌ಫಝುಲ್ 21 ಡಿಸೆಂಬರ್ 1935)

ಅಲ್ಲಾಹನು ಎಲ್ಲಾ ತಹ್ರೀಕ್ ಜದೀದ್ ಚಂದಾದಾರರ ಸಂಪತ್ತುಗಳಲ್ಲಿ ಮತ್ತು ಆತ್ಮಗಳಲ್ಲಿ ಅಸಾಮಾನ್ಯ ಅನುಗ್ರಹ ದಯಪಾಲಿಸಲಿ. ಆಮೀನ್.

**(ವಕೀಲುಲ್ ಮಾಲ್ ತಹ್ರೀಕ್ ಜದೀದ್ ಖಾದಿಯಾನ್)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 17 June 2021, Issue No. 24

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಜ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 23ರ ವರದಿಯ ಉಳಿದ ಭಾಗ)**

* ಈ ಜಲ್ಸದಲ್ಲಿ ಭಾಗವಹಿಸಿದ್ದ ಇಬ್ಬರು ಮೂವರು ವಿದ್ಯಾರ್ಥಿಗಳು ಹೇಳಿದರು. ಮಾಧ್ಯಮಗಳು ಬಿತ್ತರಿಸುತ್ತಿರುವ ಇಸ್ಲಾಮಿನ ಚಿತ್ರಣ ತುಂಬ ಆಳವಾದ ಪ್ರಭಾವ ಹೊಂದಿರುತ್ತದೆ. ಆದರೆ ಇಲ್ಲಿ ಬಂದು ಮೊದಲು ಖುರ್‌ಆನ್ ಪಠಣ ಕೇಳಿದೆ. ಅದರಲ್ಲಿ **"ಲಾ ಇಕ್ರಾಹ ಫಿದ್ದೀನ್"** (ಧರ್ಮದಲ್ಲಿ ಬಲತ್ಕಾರವಿಲ್ಲ) ಎಂಬ ವಿವರವಿತ್ತು. ಮತ್ತು ವಿಶೇಷವಾಗಿ ಖಲೀಫರ ಸಂಬೋಧನೆ ಆಲಿಸಿದ ನಂತರ ಯಥಾರ್ಥ ಶಿಕ್ಷಣದ ಅರಿವಾಯಿತು. ನಮಗೆ ಇಂದು ತಿಳಿಯಿತು. ಇಸ್ಲಾಮಿನ ನಿಜವಾದ ಶಿಕ್ಷಣ ಹಜ್ರತ್ ರಸೂಲುಲ್ಲಾಹ್(ಸ) ರವರು ಪ್ರಸ್ತುತಪಡಿಸಿದಂತಹ ಶಿಕ್ಷಣ ಇಂದಿಗೂ ಖಾಯಂ ಇದೆ. ಇಸ್ಲಾಮಿನಲ್ಲೂ ಎರಡು ರೀತಿಯ ಉಗ್ರವಾದಿಗಳಿದ್ದಾರೆ ಎಂದು ನಾನು ಭಾವಿಸಿದ್ದೆ. ಒಂದು ಲೌಕಿಕ ಕಾರ್ಯಗಳಲ್ಲಿ ಮುಳುಗಿದವರು, ಮತ್ತೊಂದು ಅತಿ ಉಗ್ರತೆ ಹೊಂದಿದವರು. ಆದರೆ ಇಂದು ಇಸ್ಲಾಮಿನ ನಿಜ ಸ್ವರೂಪವು ಕಾಣಲು ಸಿಕ್ಕಿತು. ಅದು ಈ ಎರಡರ ಮಧ್ಯದಲ್ಲಿದೆ. ಅದುವೇ ಅಹ್ಮದಿಯಾ ಜಮಾಅತ್ ಆಗಿದೆ.

* ಇಟಲಿಯಿಂದ ಬಂದ ಓರ್ವ ಮಹಿಳೆ ಹೇಳಿದರು. ನಾನು ಪ್ರವಾದಿ ಮುಹಮ್ಮದ್(ಸ) ರವರ ಮಸೀದಿ (ಮಸ್ಜಿದ್ ನಬ್ವಿ) ಕುರಿತು ಸ್ವಪ್ನ ಕಂಡಿದ್ದೆ. ಆದ್ದರಿಂದ ಇಸ್ಲಾಮಿನ ಬಗ್ಗೆ ಯೋಚನೆ ಬಂತು. ಇಲ್ಲಿ ಜಲ್ಸದಲ್ಲಿ ಭಾಗವಹಿಸಿದ್ದೇನೆ. ಖುರ್‌ಆನ್ ಪಠಣ ಕೇಳಿದಾಗ ಇದುವೇ ಯಥಾರ್ಥ ಇಸ್ಲಾಮ್ ಆಗಿದೆ ಎಂದು ಮನವರಿಕೆಯಾಯಿತು. ಈಗ ನಾನು ಇಸ್ಲಾಮಿನ ಬಗ್ಗೆ ಇನ್ನೂ ಹೆಚ್ಚಾಗಿ ಅಧ್ಯಯನ ಮಾಡುವೆನು.

* ಕ್ರೋವೇಷಿಯಾಗೆ ಸಂಬಂಧಿಸಿದ ಇಬ್ಬರು ಮಹಿಳಾ ಪತ್ರಕರ್ತೆಯರು ಸಹ ಈ ಸಂಬೋಧನೆ ಆಲಿಸಿದರು ಮತ್ತು ಅವರು ಹೇಳಿದರು. ಇಂದು ನಾವು ನಿಮ್ಮ ಸಂಬೋಧನೆ ಕೇಳಿದೆವು. ನಿಮ್ಮ ಸಂಬೋಧನೆಯು ನಮ್ಮ ಮೇಲೆ ತುಂಬ ಪ್ರಭಾವ ಬೀರಿದೆ. ಇಲ್ಲಿಯ ಪರಿಸರವು ಇಸ್ಲಾಮಿನ ಬಗ್ಗೆ ಇರುವ ನಮ್ಮ ಆಲೋಚನೆಗಳಲ್ಲಿ ಬದಲಾವಣೆ ಹೊಂದುವಂತೆ ಮಾಡಿದೆ. ನಾವು ಇಲ್ಲಿ ಹಿತ ಅನುಭವಿಸುತ್ತಿದ್ದೇವೆ.

* ಬೋಸ್ನಿಯಾಗೆ ಸಮಬಂಧಿಸಿದ ಜನರು ಹೇಳಿದರು. ಹುಜೂರ್ ರವರ ಸಂಬೋಧನೆ ತುಂಬ ಮೆಚ್ಚುಗೆಯಾಯಿತು. ಹುಜೂರ್ ಜೀವಂತ ದೇವನ ದೃಷ್ಟಿಯನ್ನು ಪ್ರಸ್ತುತಪಡಿಸಿದ್ದಾರೆ. ಈ ಸಮಯ ಅಹ್ಮದಿಯಾ ಜಮಾಅತ್ ಮಾತ್ರ, ಇಂತಹ ಒಂದು ಜಮಾಅತ್ ಆಗಿದೆ. ಅದು ಜೀವಂತ ದೇವನ ದಾವೆ ಹೊಂದಿದ್ದೆ ಮತ್ತು ಪ್ರಸ್ತುತಪಡಿಸುತ್ತಿದೆ. ಈ ಮಾತು ಇಂದು ಹುಜೂರ್ ಬಹಳ ಸರಳ ಪದಗಳಲ್ಲಿ ಮತ್ತು ಅತ್ಯುತ್ತಮ ರೀತಿಯಲ್ಲಿ ವಿವರಿಸಿದ್ದಾರೆ. ಇಂದು ಮಾನವರಿಗೆ ಅದೇ ಬೇಕಾಗಿದೆ. ನನಗೆ ನೀವು ಇತರರಿಂದ ಭಿನ್ನವಾಗಿ ಕಾಣುತ್ತೀರಿ ಮತ್ತು ಯಥಾರ್ಥ ಇಸ್ಲಾಮ್ ಕೇವಲ ನಿಮ್ಮ ಬಳಿಯಿದೆ.

* ಹಂಗೇರಿಗೆ ಸಂಬಂಧಿಸಿದ ಮಿತ್ರರೊಬ್ಬರು ಹೇಳಿದರು. ಖಲೀಫತುಲ್ ಮಸೀಹ್‌ರ ಪದಗಳ ಆಯ್ಕೆ ಉನ್ನತ ಮಟ್ಟದ್ದಾಗಿದೆ. ಅವರು ತುಂಬ ಯೋಚನೆ ಮಾಡಿ ಮಾತನಾಡುವವರಾಗಿದ್ದಾರೆ. ಹಲವು ಮುಸ್ಲಿಮ್ ಗೆಳೆಯರನ್ನು ನಾನು ಹೊಂದಿದ್ದೇನೆ. ಆದರೆ ಅಹ್ಮದಿಯಾ ಜಮಾಅತಿನಿಂದ ಸಂಬಂಧ ಏರ್ಪಟ್ಟಾಗ ತಿಳಿಯಿತು. ನಿಜವಾದ ಇಸ್ಲಾಮಿನ ಶಿಕ್ಷಣ, ಶಾಂತಿಯಶಿಕ್ಷಣ ಅಹ್ಮದಿಯರ ಬಳಿಯಿದೆ. ಅಹ್ಮದಿಯರು ಶಾಂತಿಯ ಶಿಕ್ಷಣ ಹೇಳುವುದು ಮಾತ್ರವಲ್ಲ. ಅದರಂತೆ ನಡೆದು ತೋರಿಸುವವರಾಗಿದ್ದಾರೆ.

* ಮುಸ್ಲಿಮ್ ಮಿತ್ರರೊಬ್ಬರು ಹೇಳಿದರು. ಹುಜೂರರ ಎಲ್ಲ ಮಾತುಗಳು ತುಂಬ ಹಿತ ಎನಿಸಿದವು. ಅವರ ಸಂಬೋಧನೆ ಬಲಯುತವಾಗಿತ್ತು. ಇಸ್ಲಾಮಿನ ಪ್ರಾಥಮಿಕ ಶಿಕ್ಷಣವನ್ನು ಅವರು ಅತ್ಯುತ್ತಮ ರೀತಿಯಲ್ಲಿ ಪ್ರಸ್ತುತಪಡಿಸಿದರು. ನೀವು ನನಗೆ ನನ್ನ ಧರ್ಮವನ್ನು ಮತ್ತೊಮ್ಮೆ ತಿಳಿಯುವಂತೆ ಮಾಡಿದ್ದೀರಿ. ಆ ಶಿಕ್ಷಣದ ತಿರುಳು ಜಾಗೃತಗೊಳಿಸಿದ್ದೀರಿ. ಅದಕ್ಕೆ ನಾನು ತುಂಬ ಕೃತಜ್ಞನಾಗಿದ್ದೇನೆ.

* ಮಿತ್ರರೊಬ್ಬರು ಹೇಳಿದರು. ಹುಜೂರರ ಪವಿತ್ರವಾದ ಮುಖ ತುಂಬ ಸುಂದರವಾಗಿ ಕಂಡಿತು. ನಿಮ್ಮ ಸಂಬೋಧನೆ ಬಹಳ ಪ್ರಾಮುಖ್ಯತೆ ಹೊಂದಿದೆ. ಅವರು ಈ ಮಾತನ್ನು ಸ್ಪಷ್ಟಪಡಿಸಿದರು. ಹುಜೂರ್ "a men of peace" ಆಗಿದ್ದಾರೆ. ಇಸ್ಲಾಂ ಮತ್ತು ಶಾಂತಿ ಒಂದೇ ಆಗಿದೆ. ಅದರಲ್ಲಿ ಭಿನ್ನತೆಯಿಲ್ಲ. ಇಂದು ಲೋಕದ ಶಾಂತಿ ಅಹ್ಮದಿಯಾ ಜಮಾಅತಿನ ಬಳಿಯಿದೆ.

* ಅಹ್ಮದಿಯೇತರ ಮಹಿಳೆಯೋರ್ವಳು ಹೇಳಿದರು. ಹುಜೂರ್ ಅತ್ಯಂತ ಕರುಣಾಳು ಮತ್ತು ಮೃದು ಭಾಷಿಕರಾಗಿದ್ದಾರೆ. ಅವರ ಸಂಬೋಧನೆ ಅತ್ಯಂತ ಪ್ರಭಾವ ಪೂರ್ಣವಾಗಿತ್ತು. ವಿಶೇಷವಾಗಿ ಪ್ರಸಕ್ತ ಕಾಲದವರೆಗೆ ವಿವರಗಳಿದ್ದವು.

* ಬೋಸ್ನಿಯಾದ Safar Bzigal ಸಾಹಿಬ್ ಎಂಬ ಓರ್ವ ಮಿತ್ರರು, ತಮ್ಮ ಮಗಳ ಜೊತೆಯಲ್ಲಿ ಬಂದಿದ್ದರು. ಅವರು ಹೇಳಿದರು. ಹುಜೂರ್ ಅಲ್ಲಾಹನ ದಾಸರಾಗಿದ್ದಾರೆ. ಅವರು ನನ್ನ ವಿಶ್ವಾಸದಲ್ಲಿ ಜೀವ ತುಂಬಿದ್ದಾರೆ. ಇಂದು ಲೋಕಕ್ಕೆ ಮಸೀಹ್ ಮೌಊದ್(ಅ) ರವರ ಅಗತ್ಯವಿದೆ. ಹುಜೂರ್ ನೀಡಿದ ಸಂದೇಶಗಳೆಲ್ಲ ಲೋಕ ಜನರಿಗಾಗಿವೆ ಮತ್ತು ಉಗ್ರವಾದಕ್ಕೆ ಅಪ್ಪಟ ವಿರುದ್ಧವಾಗಿವೆ. ಇಂದು ಹುಜೂರರ ಮಾತಿನಂತೆ ನಡೆದುಕೊಂಡರೆ ಲೋಕದಲ್ಲಿ ಶಾಂತಿ ನಿಲ್ಲುವುದು.

* ಕ್ರೈಸ್ತ ಶಿಕ್ಷಕರೊಬ್ಬರಾದ Edith Faika, ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತ ಹೀಗೆ ಹೇಳಿದರು. ನಾನು ಹುಜೂರರ ವ್ಯಕ್ತಿತ್ವದಿಂದ ತುಂಬ ಪ್ರಭಾವಿತನಾಗಿದ್ದೇನೆ. ಅವರ ಬಗ್ಗೆ ನನ್ನ ಹೃದಯದಲ್ಲಿ ಗೌರವವಿದೆ. ಲೋಕದ ಇತರ ವ್ಯಕ್ತಿಗಳಂತೆ ಅವರಿಗೆ ತಮ್ಮ ಪ್ರಸಿದ್ಧಿ ಕುರಿತು ಯಾವ ಚಿಂತೆ ಇಲ್ಲ. ಪೋಪರನ್ನು ನೋಡಿದರೆ ಅವರು ಪ್ರಸಿದ್ಧಿ ಪಡೆಯುವುದರಲ್ಲಿ ಆಸಕ್ತಿ ಹೊಂದಿರುತ್ತಾರೆ. ಆದರೆ ಖಲೀಫರಲ್ಲಿ ಆ ಮಾತು ಕಂಡು ಬರುವುದಿಲ್ಲ. ಹುಜೂರ್ ಮಹಿಳೆಯರನ್ನು ಸಂಬೋಧಿಸಿದರು. ಅದರಿಂದ ಅವರಿಗೆ ಮಹಿಳೆಯರ ಬಗ್ಗೆ ಇರುವ ಗೌರವ ಮತ್ತು ಪ್ರಗತಿಯ ಚಿಂತೆ ಮತ್ತು ಅವರಿಗೆ ಬೇಕಾಗಿರುವ ಮೌಲ್ಯಗಳ ಬಗ್ಗೆ ಕಾಳಜಿ ತಿಳಿಯುತ್ತದೆ. ಮುಂದುವರೆಸುತ್ತಾ ಅವರು ಹೇಳಿದರು. ಅವರ ಪ್ರಚಾರಿಕ ಸಂಬೋಧನೆಯೂ ತುಂಬ ಒಳ್ಳೆಯದಾಗಿತ್ತು. ನನಗೆ ಇಂದು ತಿಳಿಯಿತು. ನಿಜವಾದ ಇಸ್ಲಾಮ್ ಮಾಧ್ಯಮದವರು ತೋರಿಸುವಂತಹ ಇಸ್ಲಾಮ್ ಅಲ್ಲ. ಕೊನೆಯಲ್ಲಿ ಮಾಡಿದ ದುಆ ನನಗೆ ತುಂಬ ಹಿತವೆನಿಸಿತು. ನಾನು ಸಹ ನನ್ನದೇ ರೀತಿಯಲ್ಲಿ ದುಆ ಮಾಡಿದ್ದೇನೆ.

* ಇನ್ನೋರ್ವ ಮಿತ್ರರು ಹೇಳಿದರು. ಹುಜೂರ್ ಒಬ್ಬ ಶಾಂತಿಪೂರ್ಣ ವ್ಯಕ್ತಿಯಾಗಿದ್ದಾರೆ. ಅವರ ಹೃದಯ ವೈಶಾಲ್ಯ ಹಾಗೂ ಅವರು ಹೊಂದಿದ ಅಪಾರವಾದ ಜ್ಞಾನ ನನಗೆ ಮೆಚ್ಚುಗೆಯಾಯಿತು. ಅವರು ಸಂಬೋಧನೆಯಲ್ಲಿ ಸಮಾನತೆಯ ವರ್ತನೆ ಕುರಿತು ಆಡಿದ ಮಾತುಗಳು ತುಂಬ ಮೆಚ್ಚುಗೆಯಾಯಿತು. ಅಲ್ಲದೆ ಅವರ ಈ ಮಾತು ತುಂಬ ಹಿತವೆನಿಸಿತು. ಅವರು ಕೇವಲ ಶಿಕ್ಷಣ ನೀಡುವುದಿಲ್ಲ. ಬದಲು ಅದರಂತೆ ನಡೆದುಕೊಳ್ಳುತ್ತಾರೆ.

* Andreas winterhalder ಸಾಹಿಬ್ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತ ಹೀಗೆ ಹೇಳಿದರು. ಹುಜೂರರ ವ್ಯಕ್ತಿತ್ವ ಅನುಗ್ರಹಪೂರ್ಣವಾಗಿದೆ. ಅವರು ಮಾತನಾಡುವಾಗ ಇತರರಂತೆ ತನ್ನ ಬಗ್ಗೆ ಚಿಂತಿಸುವುದಿಲ್ಲ. ಎಲ್ಲ ಮಾತುಗಳು ಇದ್ದ ಹಾಗೆ ವಿವರಿಸುತ್ತಾರೆ. ಅವರ ವ್ಯಕ್ತಿತ್ವ ಮೃದುತನ, ನೆಮ್ಮದಿ ಮತ್ತು ಶಾಂತಿಯಿಂದ ತುಂಬಿಹೋಗಿದೆ. ಅವರ ಸಂದೇಶ **"ಸಮಾಜಕ್ಕೆ ಶಾಂತಿಯ ಅಗತ್ಯವಿದೆ"** ಎಲ್ಲ ಮುಸ್ಲಿಮರಿಗೆ (ಫ್ರಾನ್ಸ್‌ನ ಓರ್ವ ನವ ಅಹ್ಮದಿ)

* Anly Anfane ಸಾಹಿಬ್ ಜರ್ಮನಿ ಜಲ್ಸ ಸಾಲಾನಕ್ಕೆ ಬಂದಿದ್ದರು. ಇವರು ಖವೋರೋಮ್ ಎಂಬ ದ್ವೀಪದಲ್ಲಿ ವಾಸಿಸುವರಾಗಿದ್ದಾರೆ. ಮೂರು ವಾರಗಳ ಹಿಂದಷ್ಟೇ ಅವರು ಬೈಅತ್ ಮಾಡಿದ್ದರು. ಅವರು ಹೇಳುತ್ತಾರೆ. ಬೈಅತ್ ಮಾಡುವ ಮುಂಚೆ ನಾನು ಮುಸ್ಲಿಮನಾಗಿದ್ದೆ. ಆದರೆ ಸ್ಥಿರತೆ ಇರಲಿಲ್ಲ. ನಿನ್ನೆ ನಾನು ಹುಜೂರರ ಹಿಂದೆ ಜುಮಅ ನಮಾಝ್ ನಿರ್ವಹಿಸಿದೆ. ನನಗೆ ತುಂಬ ಸಂತೋಷವಾಯಿತು. ಮತ್ತು ಜೀವನದಲ್ಲಿ ಮೊದಲ ಬಾರಿಗೆ ನಮಾಝಿನಲ್ಲಿ ಅಳು ಬಂತು. ಜಮಾಅತ್ ಸೇರುವ ಮುಂಚೆ ನನ್ನ ಎಲ್ಲ

*(ಪುಟ ಸಂಖೆ 06 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800-103-2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.